ಕಮಲಾದೇವಿ ಚಟ್ಟೋಪಾಧ್ಯಾಯ: ಒಂದು ಅಧ್ಯಯನ

ರಾಜ್ಯಶಾಸ್ತ್ರದಲ್ಲಿ ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿ

ನಯನ

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ

ಮಾರ್ಗದರ್ಶಕರು

ಪ್ರೊ. ರಾಜಾರಾಮ ತೋಳ್ಪಾಡಿ

ನಿವೃತ್ತ ಪ್ರಾಧ್ಯಾಪಕರು

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574199

2021

ಕಮಲಾದೇವಿ ಚಟ್ಟೋಪಾಧ್ಯಾಯ: ಒಂದು ಅಧ್ಯಯನ

ಪ್ರಸ್ತಾವನೆ:

ಆಧುನಿಕ ಭಾರತದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಬೌದ್ಧಿಕ ಇತಿಹಾಸದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರವರದ್ದು (1903–1988) ವಿಶಿಷ್ಟ ಹೆಸರು. ತಮ್ಮ 85 ವರುಷಗಳ ಕ್ರಿಯಾಶೀಲ ಬದುಕಿನಲ್ಲಿ ಅವರು ಭಾರತದ ಸಂಸ್ಕೃತಿ, ಕಲೆ, ಸಮಾಜ, ಆರ್ಥಿಕತೆ ಮತ್ತು ರಾಜಕೀಯದ ಬಗೆಗೆ ಅಪಾರ ಕಾಳಜಿಯನ್ನು ವಹಿಸಿದವರು. ಮಂಗಳೂರಿನ ಸಾರಸ್ವತ ಸಮುದಾಯದಲ್ಲಿ ಹುಟ್ಟಿದ ಕಮಲಾದೇವಿಯವರು ರಾಷ್ಟ್ರೀಯ ಆಂದೋಲನದಲ್ಲಿ ಮಹಿಳಾ ದನಿಯಾಗಿ ಮತ್ತು ಸಾಮಾಜಿಕ ಪರಿವರ್ತನೆಯ ರಚನಾತ್ಮಕ ಅಭಿವ್ಯಕ್ತಿಯಾಗಿ ಹಾಗೂ ಸ್ವಾತಂತ್ರ್ಯ ನಂತರದ ಭಾರತದಲ್ಲಿ ನಿರಾಶ್ರಿತರ ಬದುಕಿನ ಮರುಸಂಘಟನೆ, ಹಸ್ತಕಲೆಯ ಪುನಶ್ಚೇತನ ಮತ್ತು ಗ್ರಾಮೀಣ ಬದುಕಿನ ಉಳಿವಿಗಾಗಿ ಶ್ರಮಿಸಿದವರು. ಪ್ರಜಾತಂತ್ರ, ಸಮಾಜವಾದ, ಲಿಂಗ ಸಮಾನತೆ, ಸಾಮಾಜಿಕ ನ್ಯಾಯ, ಆರ್ಥಿಕ ಸುಸ್ಥಿರತೆ, ಸ್ವಾವಲಂಬನೆ ಮತ್ತು ಅಭಿವೃದ್ಧಿಯ ಕುರಿತಾದ ಅವರ ಚಿಂತನೆಗಳು ಸಮಕಾಲೀನ ಭಾರತದ ಇತಿಹಾಸದಲ್ಲಿ ಅವರಿಗೆ ಮಹತ್ವದ ಸ್ಥಾನವನ್ನು ಒದಗಿಸುತ್ತದೆ.

1903 ಎಪ್ರಿಲ್ 3 ರಂದು ಮಂಗಳೂರಿನ ಶ್ರೀಮಂತ ಸಾರಸ್ವತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ ಕಮಲಾದೇವಿಯವರು 1988 ಅಕ್ಟೋಬರ್ 29ರಂದು ಕಣ್ಮರೆಯಾದರು. ಅವರ ಬಾಲ್ಯದ ಬದುಕಿನಲ್ಲಿ ನಡೆದ ಕೆಲವು ಘಟನೆಗಳು ಅವರನ್ನು ಬಾಲ್ಯವಿವಾಹಕ್ಕೆ ಒಳಗಾಗುವಂತೆ ಮಾಡಿತು. ಬಾಲ್ಯವಿವಾಹವಾಗಿ ವರುಷ ಕಳೆಯುವುದರೊಳಗಾಗಿ ಬಾಲವಿಧವೆಯಾದ ಅವರು ಅನಿವಾರ್ಯ ಪರಿಸ್ಥಿತಿಗಳಿಂದಾಗಿ ಮಂಗಳೂರಿನ ಸಾಂಪ್ರದಾಯಿಕ ಬದುಕಿಗಿಂತ ಭಿನ್ನವಾದ ಮದ್ರಾಸಿನಲ್ಲಿ ನೆಲೆಸಬೇಕಾಯಿತು. ಈ ಹೊಸ ಪರಿಸರದಲ್ಲಿ ಕವಿ ಹರೀಂದ್ರನಾಥ್ ಚಟ್ಟೋಪಾಧ್ಯಾಯರನ್ನು ಭೇಟಿಯಾಗಿ ಮರು ಮದುವೆಯಾದ ಅವರು ಸಾಂಸಾರಿಕ ಬವಣೆಗಳನ್ನು ಎದುರಿಸುತ್ತಲೇ ರಾಷ್ಟ್ರೀಯ ಆಂದೋಲನದಲ್ಲಿ ನಿರಂತರವಾಗಿ ತೊಡಗಿಸಿಕೊಂಡರು. ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಮದ್ರಾಸ್ ವಿಧಾನ ಸಭೆಗೆ ಸ್ಪರ್ಧಿಸಿದ ಮೊದಲ ಮಹಿಳೆ ಅನ್ನುವ ಖ್ಯಾತಿಯನ್ನು ಗಳಿಸಿದ ಅವರು ಚುನಾವಣೆಯಲ್ಲಿ ಸೋತರೂ ಭಾರತದ ರಾಷ್ಟ್ರೀಯ ರಾಜಕಾರಣದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡರು. ತಮ್ಮ ಯುರೋಪ್ ಪ್ರವಾಸದ ವೇಳೆಯಲ್ಲಿ ಪತಿ ಹರಿಂದ್ರನಾಥರ ಅಣ್ಣ ವೀರೇಂದ್ರನಾಥ್ ಚಟ್ಟೋಪಾಧ್ಯಾಯರ ಜೊತೆಗಿನ ಚರ್ಚೆಯಲ್ಲಿ ಕಮಲಾದೇವಿಯವರು ಎಡಪಂಥೀಯ ನೆಲೆಯ ಸಮಾನತಾವಾದಿ ರಾಷ್ಟ್ರ ದೃಷ್ಟಿಯನ್ನು ಗಳಿಸಿಕೊಂಡರು. ಪಂಡಿತ್ ಜವಾಹರ್‌ಲಾಲ್ ನೆಹರು, ಯುಸೂಫ್ ಮೆಹರುಲಿ ಮತ್ತಿತರ

ಅನೇಕ ಕಾಂಗ್ರೆಸ್ ಸಮಾಜವಾದಿ ಧುರೀಣರ ಜೊತೆಗಿನ ಅವರ ನಿರಂತರ ಒಡನಾಟದಿಂದಾಗಿ ಅವರ ಎಡಪಂಥೀಯ ಧೋರಣೆ ಪಕ್ವಗೊಳ್ಳುತ್ತ ಬಂತು ಎನ್ನಬಹುದು. ಮಹಾತ್ಮ ಗಾಂಧೀಜಿಯವರ ನಾಯಕತ್ವದ ರಾಷ್ಟ್ರೀಯ ಹೋರಾಟದಲ್ಲಿ ಕಮಲಾದೇವಿಯವರು ಪಾಲ್ಗೊಂಡು ಮಹತ್ವದ ಪಾತ್ರವನ್ನು ನಿರ್ವಹಿಸಿದ್ದಲ್ಲದೆ, ನೆಹರೂ ಮೊದಲಾದ ಪುರೋಗಾಮಿ ಧುರೀಣರ ಜೊತೆಗಿನ ಒಡನಾಟ ಹಾಗೂ ಜಯಪ್ರಕಾಶ್ ನಾರಾಯಣ್‌ರಂತಹ ಕ್ರಾಂತಿಕಾರಿ ಸಮಾಜವಾದಿ ನಾಯಕರ ಜೊತೆಗಿನ ಬೌದ್ಧಿಕ ಸಖ್ಯ ಕಮಲಾದೇವಿಯವರನ್ನು ಓರ್ವ ಪ್ರಗತಿಶೀಲ ಚಿಂತನೆಯ ರಚನಾತ್ಮಕ ಮನೋಭಾವದ ಮತ್ತು ಕ್ರಾಂತಿಕಾರಿ ಅಭಿಲಾಷೆಯ ಸಾರ್ವಜನಿಕ ಧುರೀಣೆಯನ್ನಾಗಿ ರೂಪಿಸಿತು.

ಮೇಲೆ ಸೂಚಿಸಿದ ವಿಭಿನ್ನ ಬಗೆಯ ಪ್ರಖರವಾದ ಪ್ರಭಾವಗಳು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಮಲಾದೇವಿಯವರನ್ನು ವಿಶಿಷ್ಟವಾದ ಕಾರ್ಯಸೂಚಿಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿತು. ಈ ಕಾರ್ಯಸೂಚಿ ಅಧಿಕಾರ ರಾಜಕಾರಣಕ್ಕಿಂತ ಮೂಲಭೂತವಾಗಿ ಭಿನ್ನವಾಗಿತ್ತು. ರಚನಾತ್ಮಕ ನೆಲೆಯ ಈ ಕಾರ್ಯಸೂಚಿ ಸ್ವತಂತ್ರ ಭಾರತದಲ್ಲಿ ಜನಸಮುದಾಯಗಳನ್ನು ಪುನರ್ ಸಂಘಟಿಸುವ, ಪ್ರಜಾತಾಂತ್ರಿಕ ಹಾಗೂ ಸಹಕಾರಿ ಸಂರಚನೆಗಳಲ್ಲಿ ಅವರ ಕ್ರಿಯಾಶೀಲತೆಗಳನ್ನು ಪುನರ್ ನಿಯೋಜಿಸುವ ನೆಲೆಯದ್ದಾಗಿತ್ತು. ದೇಶ ವಿಭಜನೆಯಿಂದಾಗಿ ಉಂಟಾದ ನಿರಾಶ್ರಿತರ ಸಮಸ್ಯೆಯನ್ನು ನಿರ್ವಹಿಸುವಲ್ಲಿ, ಅವರ ಅಸ್ತಿತ್ವ ಮತ್ತು ಅಸ್ಮಿತೆಗಳಿಗೆ ರಕ್ಷಣೆ ನೀಡುವಲ್ಲಿ ಹಾಗೂ ದಿಕ್ಕಾಪಾಲಾಗಿ ಹೋಗಬಹುದಾದ ಅವರ ಬದುಕನ್ನು ಮರುಸಂಘಟಿಸುವಲ್ಲಿ ಕಮಲಾದೇವಿಯವರ ಈ ರಚನಾತ್ಮಕ ಕ್ರಿಯಾಶೀಲ ರಾಜಕಾರಣ ತನ್ನ ಮೊದಲ ಹೆಜ್ಜೆಯನ್ನು ಇರಿಸಿತು ಎನ್ನಬಹುದು. ತದನಂತರದ ವಿವಿಧ ಕಾಲಘಟ್ಟಗಳಲ್ಲಿ ಅವರು ಭಾರತೀಯ ಬದುಕಿನ ಅನೇಕ ಮಹತ್ವದ ಸ್ತರಗಳಲ್ಲಿ ತಮ್ಮ ಕ್ರಿಯಾಶೀಲ ನಡುಪ್ರವೇಶವನ್ನು ನಡೆಸಿದರು. ಭಾರತೀಯ ಹಸ್ತಕಲೆಯ ಪುನಶ್ಚೇತನದ ಕಮಲಾದೇವಿಯವರ ಪ್ರಯತ್ನ ಇವುಗಳಲ್ಲಿ ಪ್ರಮುಖವಾದದ್ದು. ಅಂತೆಯೇ, ಆಧುನೀಕರಣ ಮತ್ತು ಔದ್ಯೋಗಿಕರಣದಿಂದ ಅಸ್ತವ್ಯಸ್ತಗೊಂಡ ಗ್ರಾಮೀಣ ಬದುಕನ್ನು ಪುನರ್ ಸಂಘಟಿಸುವ ಅವರ ಕಾರ್ಯ ಮತ್ತು ಆ ಮೂಲಕ ಸ್ವ ಉದ್ಯೋಗ, ಸ್ವಾವಲಂಬನೆ ಮತ್ತು ಸಹಕಾರಿ ತತ್ತ್ವಗಳನ್ನು ಜನಜೀವನದಲ್ಲಿ ಪಸರಿಸುವ ಅವರ ಪ್ರಯಾಸ ಉಲ್ಲೇಖನೀಯವಾದದ್ದು. ಜೊತೆಯಲ್ಲಿಯೇ, ಸಂಗೀತ, ನಾಟಕ, ಯಕ್ಷಗಾನ, ನೃತ್ಯ ಹಾಗೂ ಗೊಂಬೆಯಾಟಗಳಂತಹ ಕಲಾಪ್ರಕಾರಗಳಿಗೆ ಮರು ಜೀವ ನೀಡುವ ಅವರ ಪ್ರಯತ್ನಗಳು ಗಮನಾರ್ಹವಾದದ್ದು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಮಲಾದೇವಿಯವರು ನಡೆಸಿದ ಈ ಬಹುಮುಖಿ ಪ್ರಯತ್ನಗಳು ಕಲೆಗೋಸ್ಕರ ಕಲೆ ಅನ್ನುವ ಶಿಷ್ಟ ಚಿಂತನೆಯಿಂದ ಹೊರಹೊಮ್ಮಿದ ವಿಚಾರಲಹರಿಯಲ್ಲ ಅಥವಾ ಅದು ಸರಳ ರೂಪದ ಸೌಂದರ್ಯೋಪಾಸನೆಯೂ ಅಲ್ಲ. ಬದಲಾಗಿ, ಈ ಪ್ರಯತ್ನಗಳು ಅವರ ಕ್ರಿಯಾಶೀಲ

ಚಿಂತನೆಯಲ್ಲಿ ಆಳವಾಗಿ ಹುದುಗಿರುವ ಪ್ರಜಾತಾಂತ್ರಿಕ ಹಾಗೂ ಸಾಮುದಾಯಿಕ ಕಾಳಜಿಗಳನ್ನೂ ಪ್ರತಿನಿಧಿಸುತ್ತದೆ. ನಿರಾಶ್ರಿತರ ಉಳಿವಿಗೆ ಮತ್ತು ರಕ್ಷಣೆಗೆ ಅವರು ನಡೆಸಿದ ಪ್ರಯತ್ನ, ಹಸ್ತಕಲೆಯ ಪುನಶ್ಚೇತನಕ್ಕಾಗಿ ಅವರು ನಡೆಸಿದ ಹೋರಾಟ, ಗ್ರಾಮೀಣ ಬದುಕಿನ ಸ್ವಾವಲಂಬನೆಗಾಗಿ ಅವರು ಮಾಡಿದ ಸಾಹಸ ಇವೆಲ್ಲವೂ ಅವರ ಸಮಾನತಾವಾದಿ ಸಾಮುದಾಯಿಕ ಪ್ರಜಾತಂತ್ರದ ಬಗೆಗಿನ ಕಾಳಜಿಗಳನ್ನು ಪ್ರತಿಬಿಂಬಿಸುತ್ತದೆ. ಕಲೆಯ ಹಿಂದಿನ ಕಲಾವಿದ ಅಥವಾ ಕಸುಬಿನ ಹಿಂದಿನ ಕಸುಬುಗಾರ ಅವರಿಗೆ ಕಲೆ ಅಥವಾ ಕಸುಬಿನಷ್ಟೇ ಮುಖ್ಯ. ಆದ್ದರಿಂದ, ಕಮಲಾದೇವಿಯವರನ್ನು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಕಲೆಯ ಶ್ರೇಯಸ್ಸಿಗಾಗಿ ದುಡಿದ ಕಾರ್ಯಕರ್ತೆ ಎಂದು ಪರಿಗಣಿಸುವ ಜೊತೆಗೆ ಸಮುದಾಯಗಳ ಶ್ರೇಯಸ್ಸಿಗಾಗಿ ಪ್ರಯಾಸ ನಡೆಸಿದ ಧುರೀಣೆ ಎಂದು ಗುರುತಿಸಬೇಕಾಗುತ್ತದೆ. ಹಾಗಾಗಿ, ಅವರ ಅಧಿಕಾರ ನಿರ್ಮೋಹಿ ರಚನಾತ್ಮಕ ರಾಜಕಾರಣದಲ್ಲಿ ಹುದುಗಿರುವ ಪ್ರಜಾತಾಂತ್ರಿಕ ಹಾಗೂ ಸಾಮುದಾಯಿಕ ಆಶಯಗಳನ್ನು ವಿಮರ್ಶಾತ್ಮಕ ಬೆಳಕಿನಲ್ಲಿ ಮುಂದಿಡುವ ಅಗತ್ಯವಿದೆ.

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ, ಪ್ರಸ್ತುತ ಮಹಾಪ್ರಬಂಧ ಕಮಲಾದೇವಿಯವರ ಬದುಕು, ಬರಹ ಮತ್ತು ಕ್ರಿಯಾಚರಣೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಸಾಧನೆಯಲ್ಲಿ ಅಡಕವಾಗಿರುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ರಾಜಕೀಯ ವಿಚಾರಗಳನ್ನು ಒಂದು ವಿಮರ್ಶಾತ್ಮಕ ಚೌಕಟ್ಟಿನಲ್ಲಿ ಮುಂದಿಡಬಯಸುತ್ತದೆ.

ಅಧ್ಯಯನದ ಮಹತ್ವ ಮತ್ತು ವ್ಯಾಪ್ತಿ

ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳ ಈ ಅಧ್ಯಯನ ಎರಡು ಪ್ರಮುಖ ಎಳೆಗಳಲ್ಲಿ ತನ್ನ ಅಧ್ಯಯನದ ಪ್ರಾಮುಖ್ಯತೆಯನ್ನು ಮುಂದಿಡ ಬಯಸುತ್ತದೆ. ಮೊದಲನೆಯದಾಗಿ, ಕಮಲಾದೇವಿಯವರು ಹುಟ್ಟಿ ಬೆಳೆದ ಮಂಗಳೂರು ಅವರು ನಮ್ಮನ್ನು ಅಗಲಿದ ಕಳೆದ ಮೂವತ್ತಮೂರು ವರುಷಗಳಲ್ಲಿ ಸಾಕಷ್ಟು ಬದಲಾವಣೆಯನ್ನು ಹೊಂದಿದೆ. ಪರಿವರ್ತನೆ ಅಥವಾ ಬದಲಾವಣೆಗೆ ಸದಾ ತೆರೆದುಕೊಂಡಂತೆ ಕಾಣುವ ಮಂಗಳೂರು ಈ ಬದಲಾವಣೆಯ ಪ್ರಕ್ರಿಯೆಯಲ್ಲಿ ಪಡೆದುಕೊಂಡದ್ದಕ್ಕಿಂತ ಕಳೆದುಕೊಂಡದ್ದು ಹೆಚ್ಚೆಂದರೆ ತಪ್ಪಾಗಲಾರದು. ಮಂಗಳೂರಿನ ಅಭಿವೃದ್ಧಿಯ ದೃಷ್ಟಿಯಿಂದ ಈ ಬದಲಾವಣೆಗಳು ಅಥವಾ ಪರಿವರ್ತನೆಗಳು ಅಗತ್ಯವಾಗಿತ್ತಾದರೂ, ದೊಡ್ಡ ದೊಡ್ಡ ಮಹಲುಗಳ ಮಧ್ಯೆ ಮಂಗಳೂರಿನ ಹಳೆಯ ನೆನಪುಗಳು ಹೂತು ಹೋಗಿವೆ. ದಿನದಿಂದ ದಿನಕ್ಕೆ ವಿಪರೀತವಾಗಿ ಬದಲಾಗುತ್ತಿರುವ ಮಂಗಳೂರಿನ ಬದುಕಿನಲ್ಲಿ ನಮ್ಮ ಊರು-ಕೇರಿಗಳನ್ನು ಕಟ್ಟಿದ, ನಾಡು-ನುಡಿಗಳನ್ನು ಬೆಳೆಸಿದ ಯಾವ ಚಿಂತಕರನ್ನು ನಾವು ನೆನಪಿಸಿಕೊಳ್ಳುವ ಅಥವಾ ವಿಮರ್ಶಾತ್ಮಕವಾಗಿ ಗುರುತಿಸುವ

ಗೋಜಿಗೆ ಹೋಗುವುದೇ ಇಲ್ಲ. ಅದರಲ್ಲೂ, ಮಂಗಳೂರಿನಲ್ಲಿ ಹುಟ್ಟಿ ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯ ನಂತರದ ಭಾರತದಲ್ಲಿ ಮತ್ತು ವಿಶ್ವದಲ್ಲಿ ವಿಶಿಷ್ಟವಾಗಿ ಗುರುತಿಸಿಕೊಂಡ ನಾಯಕರ ಹಾಗೂ ಸಮಾಜ ಸುಧಾರಕರ ಬಗೆಗಿನ ನಮ್ಮ ತಿಳುವಳಿಕೆ ಅಲ್ಪ ಸ್ವಲ್ಪವಷ್ಟೇ. ಭಾರತದ ಚಿಂತನಾ ಪರಂಪರೆಯಲ್ಲಿ ತನ್ನ ಕ್ರಿಯಾಶೀಲ ಸಾಧನೆಗಳಿಗಾಗಿ ವಿಶಿಷ್ಟ ಸ್ಥಾನವನ್ನು ಪಡೆದುಕೊಳ್ಳುವ ಕಮಲಾದೇವಿಯವರು ಮಂಗಳೂರಿನ ನಾಗರಿಕ ಸಮಾಜದ ಯಾವ ಚರ್ಚೆಗಳಲ್ಲೂ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುವುದಿಲ್ಲ. ನಮ್ಮ ದೇಶದ ಮತ್ತು ಪ್ರಪಂಚದ ಹಲವೆಡೆ ಅವರ ಬಗೆಗಿನ ಅಧ್ಯಯನಗಳು, ಚರ್ಚೆಗಳು ನಡೆಯುತ್ತವೆಯಾದರೂ ಮಂಗಳೂರು ಮತ್ತು ಕರ್ನಾಟಕದ ಪಾಲಿಗೆ ಕಮಲಾದೇವಿಯವರು ಸಂಪೂರ್ಣವಾಗಿ ಮಾಸಿ ಹೋದ ನೆನಪು. ಅವರನ್ನು ನೆನಪಿಸಿಕೊಳ್ಳುವ ಹಲವು ಸಂಗತಿಗಳು ಮಂಗಳೂರಿನ ಮುಂದಿದ್ದರೂ ಯಾಕೆ ಮಂಗಳೂರು ಅವರನ್ನು ಹೊರಗಿಟ್ಟಿದೆ ಅಥವಾ ಮಂಗಳೂರಿನ ಇತಿಹಾಸದ ಪುಟಗಳಲ್ಲಿ ಅವರ ಹೆಸರು ಯಾಕೆ ಅಳಿಸಿ ಹೋಗಿದೆ? ಅಥವಾ ಮಂಗಳೂರಿನ ದುರ್ಬಲ ನೆನಪಿನ ಗೊಂಚಲಿನಿಂದ ಕಮಲಾದೇವಿ ಮತ್ತು ಇತರ ಅನೇಕರು ಉದುರಿ ಹೋಗಿರುವ ಈ ಸಂದರ್ಭದಲ್ಲಿ, ಕಮಲಾದೇವಿಯವರ ಕುರಿತಾದ ದಟ್ಟವಾದ ನೆನಪಿನ ಆದರೆ ವಿಮರ್ಶಾತ್ಮಕವಾದ ಅಧ್ಯಯನದ ಅವಶ್ಯಕತೆಯಿದೆ.

ಎರಡನೆಯದಾಗಿ, ಆಧುನಿಕ ಭಾರತ ಇಂದು ಪ್ರಜಾತಂತ್ರ ಮತ್ತು ಅಭಿವೃದ್ಧಿಯ ಬಗೆಗೆ ಎದುರಿಸುತ್ತಿರುವ ಆತಂಕಗಳನ್ನು ಕಮಲಾದೇವಿಯವರ ಚಿಂತನೆಯ ಹಿನ್ನೆಲೆಯಲ್ಲಿ ಮರುಪರಿಶೀಲಿಸುವ ಹಾಗೂ ಆ ಮೂಲಕ ಪರಿಹಾರದ ಹೊಸದಾರಿಗಳನ್ನು ಕಂಡುಕೊಳ್ಳುವ ಅಪಾರ ಸಾಧ್ಯತೆಗಳು ಕಾಣಿಸುತ್ತವೆ. ಅವರ ಚಿಂತನೆಯಲ್ಲಿ ಹಾಸುಹೊಕ್ಕಂತಿರುವ ಆರ್ಥಿಕ ಪುನರ್ ಸಂಘಟನೆಯ ವಿಶಿಷ್ಟ ಆಯಾಮಗಳು, ಗ್ರಾಮೀಣ ಬದುಕಿನ ಪುನಶ್ಚೇತನದ ಮಾರ್ಗೋಪಾಯಗಳು, ಅಭಿವೃದ್ಧಿಯ ಕುರಿತಾದ ಅವರ ಮೂಲ ಜಿಜ್ಞಾಸೆ, ಶಿಕ್ಷಣದ ಬಗೆಗಿನ ಅವರ ವಿಚಾರಗಳು, ಸಮುದಾಯ, ಸಹಕಾರ ಮತ್ತು ಸಮಾನತೆಯ ನೆಲೆಯಲ್ಲಿ ಅವರು ಮಂಡಿಸಿದ ಕಾರ್ಯಸೂಚಿ, ಕರಕುಶಲ ಕ್ಷೇತ್ರಗಳ ಪುನರುಜ್ಜೀವನ ಇಂದಿನ ನಮ್ಮ ಸಾಂಸ್ಕೃತಿಕ ಸಂಕಟದ ಸಂದರ್ಭದಲ್ಲಿ ನಾವು ಮರು ಸಂದರ್ಶಿಸಬೇಕಾದ ಬೌದ್ಧಿಕ ಆಕರಗಳು ಎನ್ನುವ ನೆಲೆಯಲ್ಲಿಯೂ ಪ್ರಸ್ತುತ ಅಧ್ಯಯನ ತನ್ನ ಮಹತ್ವವನ್ನು ಪಡೆದುಕೊಳ್ಳುತ್ತದೆ.

ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳ ಕುರಿತಾದ ಈ ವಿಮರ್ಶಾತ್ಮಕ ಅಧ್ಯಯನ ವಿವರಣಾತ್ಮಕವಾದದ್ದಲ್ಲ. ಇದು ಅವರ ಬದುಕಿನ ಎಲ್ಲ ಘಟನೆಗಳನ್ನು ಅಥವಾ ಚಿಂತನೆಯ ಎಲ್ಲ ಆಯಾಮಗಳನ್ನು ಕಾಲಬದ್ಧವಾಗಿ ಮತ್ತು ವಿವರಣಾತ್ಮಕವಾಗಿ ಒಳಗೊಳ್ಳುವುದಿಲ್ಲ. ಬದಲಾಗಿ, ಈ ಅಧ್ಯಯನದಲ್ಲಿ ಕಮಲಾದೇವಿಯವರು ಹುಟ್ಟಿ ಬೆಳೆದ ಮತ್ತು ಸಾರ್ವಜನಿಕ ಧುರೀಣೆಯಾಗಿ

ರೂಪುಗೊಂಡ ಸಂದರ್ಭ ಹಾಗೂ ಅವರು ಪ್ರತಿನಿಧಿಸಿದ ಮತ್ತು ಪ್ರತಿಪಾದಿಸಿದ ವಿಚಾರಗಳ ನಡುವೆ ಇರುವ ದ್ವಂದ್ವಾತ್ಮಕ ಸಂಬಂಧದ ಬಗ್ಗೆ ಇಲ್ಲಿ ಹೆಚ್ಚಿನ ಒತ್ತನ್ನು ಕೊಡಲಾಗಿದೆ.

ಕಮಲಾದೇವಿಯವರ ಸಾರ್ವಜನಿಕ ಬದುಕಿನ ಬೌದ್ಧಿಕ ವಿಶ್ಲೇಷಣೆಯನ್ನು ನಡೆಸುವ ಈ ಅಧ್ಯಯನ ಅವರ ಚಿಂತನೆ ಮತ್ತು ಕ್ರಿಯಾಚರಣೆಗಳಲ್ಲಿ ಅಡಕವಾಗಿರುವ ನಾಲ್ಕು ಪ್ರಮುಖ ಕಾಳಜಿಗಳನ್ನು ಗುರುತಿಸಬಯಸುತ್ತದೆ. ಮೊದಲನೆಯದಾಗಿ, ಅವರ ಕಾರ್ಯಪ್ರಪಂಚದಲ್ಲಿ ಮೂಡಿಬಂದ ವಿಶಿಷ್ಟ ಬಗೆಯ ಪ್ರಜಾತಾಂತ್ರಿಕ ಕಾಳಜಿಗಳು, ಎರಡನೆಯದಾಗಿ, ಅವರ ನಾರೀವಾದದ ಪ್ರತಿಫಲನಗಳು ಮೂರನೆಯದಾಗಿ, ಅವರ ಸ್ವಾವಲಂಬನೆಯ ಕಲ್ಪನೆ ಮತ್ತು ಕೊನೆಯದಾಗಿ, ಸೃಜನಶೀಲತೆಯ ಪ್ರಯೋಗಗಳು ಈ ಅಧ್ಯಯನದ ಪ್ರಮುಖ ಭಾಗವಾಗುತ್ತವೆ. ಹಾಗೆ ಮಾಡುವಾಗ, ಇಂದು ಭಾರತ ಮತ್ತು ವಿಶ್ವ ಎದುರಿಸುತ್ತಿರುವ ಆರ್ಥಿಕ ಪರಾವಲಂಬನೆ, ಸಾಂಸ್ಕೃತಿಕ ಮತ್ತು ಸಾಮುದಾಯಿಕ ಅಸ್ಮಿತೆಗಳ ದಮನ ಹಾಗೂ ಭೂಮಂಡಲೀಕರಣದ ಸಮಸ್ಯೆಗಳು ಮತ್ತು ಸವಾಲುಗಳಿಗೆ ಕಮಲಾದೇವಿಯವರ ಚಿಂತನೆ ಮತ್ತು ಕಾಳಜಿಗಳು ಹೇಗೆ ಪರ್ಯಾಯವನ್ನು ಒದಗಿಸಬಲ್ಲದು ಅನ್ನುವುದನ್ನು ಇಲ್ಲಿ ಚರ್ಚಿಸಲಾಗಿದೆ.

ಉದ್ದೇಶಗಳು:

ಪ್ರಸ್ತುತ ಅಧ್ಯಯನ ಈ ಕೆಳಗಿನ ಉದ್ದೇಶಗಳನ್ನು ಒಳಗೊಂಡಿದೆ.

1. ಕಮಲಾದೇವಿಯವರ ಚಿಂತನೆ ಹಾಗೂ ಕ್ರಿಯಾಚರಣೆಗಳನ್ನು ಅವರ ಬದುಕಿನ ನಿರ್ದಿಷ್ಟ ಸನ್ನಿವೇಶಗಳಲ್ಲಿ ಪ್ರಸ್ತುತಪಡಿಸುವುದು.
2. ಅವರ ಚಿಂತನೆಯ ಮತ್ತು ಸಾಧನೆಯ ಪ್ರಮುಖ ಅಂಶಗಳನ್ನು ಆಧುನಿಕ ಭಾರತದ ಚಾರಿತ್ರಿಕ ಪರಿಪ್ರೇಕ್ಷ್ಯದಲ್ಲಿ ಮುಂದಿಡುವುದು
3. ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳಲ್ಲಿ ವ್ಯಕ್ತಗೊಳ್ಳುವ ವಿವಿಧ ತಾತ್ತ್ವಿಕ ಕಾಳಜಿಗಳನ್ನು ಗುರುತಿಸುವುದು.
4. ಅವರ ಚಿಂತನೆಯಲ್ಲಾದ ಪ್ರಮುಖ ಪಲ್ಲಟಗಳನ್ನು ವಿಷದಪಡಿಸುವುದು
5. ಕಮಲಾದೇವಿಯವರ ಚಿಂತನೆಯ ಇಂದಿನ ಮಹತ್ವವನ್ನು ಚರ್ಚಿಸುವುದು

ಸಂಶೋಧನಾ ಪ್ರಶ್ನೆಗಳು:

1. ಕಮಲಾದೇವಿಯವರ ಕುರಿತು ನಡೆದ ಅಧ್ಯಯನಗಳು ಅವರನ್ನು ಓರ್ವ ವಿಶ್ವಾತ್ಮಕ ನೆಲೆಯ ಚಿಂತಕರೆಂದು ಗುರುತಿಸುತ್ತವೆ. ಅವರ ಈ ವಿಶ್ವಾತ್ಮಕ ಚಿಂತನೆಯ ಸ್ಥಾನೀಯ ನೆಲೆಗಳೇನು?

ಹಾಗೂ ಅವುಗಳನ್ನು ಅವರು ತಮ್ಮ ಈ ವಿಶ್ವಾತ್ಮಕ ದೃಷ್ಟಿಕೋನದೊಂದಿಗೆ ಹೇಗೆ ಬೆಸೆಯುತ್ತಾರೆ ಎನ್ನುವ ಪ್ರಶ್ನೆಯನ್ನು ಈ ಅಧ್ಯಯನ ಪರಿಶೀಲಿಸುತ್ತದೆ. ಅಂತೆಯೇ, ಕಮಲಾದೇವಿಯವರು ಪ್ರತಿನಿಧಿಸಿದ ಈ ವಿಶ್ವಾತ್ಮಕತೆ ಹೇಗೆ ಅಂಚಿನ ಬಗೆಗಿನ ಎಚ್ಚರವನ್ನು ಬಿಂಬಿಸುತ್ತದೆ ಎನ್ನುವ ಅಂಶವನ್ನು ಈ ಅಧ್ಯಯನ ಗಮನಿಸುತ್ತದೆ.

2. ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳಲ್ಲಿ ಒಂದು ವಿಶಿಷ್ಟ ಬಗೆಯ ಸಂಸ್ಕೃತಿ ನಿಷ್ಠ ಸಮುದಾಯ ಬದ್ಧ ಪ್ರಜಾತಂತ್ರದ ಕಲ್ಪನೆ ಎದ್ದು ಕಾಣುತ್ತದೆ. ಈ ಅಧ್ಯಯನ ಅವರ ಈ ವಿಶಿಷ್ಟ ಬಗೆಯ ಪ್ರಜಾತಾಂತ್ರಿಕತೆಯ ರೂಪುರೇಷೆಗಳೇನು? ಎನ್ನುವುದನ್ನು ಶೋಧಿಸಬಯಸುತ್ತದೆ.

3. ಕಮಲಾದೇವಿಯವರು ಪ್ರತಿನಿಧಿಸುವ ರಾಜಕೀಯ ಅಧಿಕಾರದ ನಿರ್ಮೋಹತ್ವ ಅವರನ್ನು ಓರ್ವ ಕ್ರಿಯಾಶೀಲತೆಯೇ ಮುಖ್ಯವಾಗುವ ಚಿಂತಕರನ್ನಾಗಿಸಿದೆ. ನಿರಂತರವಾಗಿ ಅವರಲ್ಲಿ ಕಂಡು ಬಂದ ಈ ರಾಜಕೀಯ ಅಧಿಕಾರ ನಿರಾಕರಣೆ ಮತ್ತು ಕೆಲವೊಮ್ಮೆ ಅದರ ವಿರೋಧ ನಾವು ಸಾಧಾರಣವಾಗಿ ರಾಜಕಾರಣ ಎಂದು ಗುರುತಿಸುವ ವಿದ್ಯಮಾನಕ್ಕಿಂತ ಭಿನ್ನವಾದದ್ದು. ಹಾಗಾಗೀ, ಕಮಲಾದೇವಿಯವರನ್ನು ಸಾರ್ವಜನಿಕ ಹಿತಾಸಕ್ತಿಯನ್ನು ಎತ್ತಿಹಿಡಿಯುವ ಓರ್ವ ಅಪರೂಪದ ಸಾರ್ವಜನಿಕ ಬುದ್ಧಿಜೀವಿ ಎಂದು ಪರಿಗಣಿಸಬಹುದೇ? ಎನ್ನುವುದನ್ನು ಈ ಅಧ್ಯಯನ ಪರಿಶೀಲಿಸುತ್ತದೆ. ಅಂತೆಯೇ, ಅವರ ಸಾರ್ವಜನಿಕ ಕ್ರಿಯಾಶೀಲತೆಯ ವಿಶಿಷ್ಟ ಕಾಳಜಿಗಳೇನು? ಎನ್ನುವುದು ಈ ಪರಿಶೋಧನೆಯ ಪ್ರಮುಖ ಪ್ರಶ್ನೆಗಳಲ್ಲೊಂದು.

ಪ್ರಮೇಯಗಳು:

ಪ್ರಸ್ತುತ ಸಂಶೋಧನೆ ಈ ಕೆಳಗಿನ ಪ್ರಮೇಯಗಳನ್ನು ಪರಿಶೀಲಿಸುತ್ತದೆ.

1. ಆಧುನಿಕ ಭಾರತದ ರಾಜಕಾರಣದಲ್ಲಿ ವಿಭಿನ್ನ ನೆಲೆಯ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡ ಕಮಲಾದೇವಿಯವರು ಬಹುಮುಖಿ ಸೃಜನಾತ್ಮಕತೆಯ ಅಪರೂಪದ ಪ್ರತಿನಿಧಿಯೆನಿಸಿಕೊಳ್ಳುತ್ತಾರೆ. ಆದ್ದರಿಂದ, ಭಾರತದ ಬೌದ್ಧಿಕ ಮತ್ತು ರಾಜಕೀಯ ಇತಿಹಾಸದಲ್ಲಿ ಅವರು ವಿಶೇಷ ಸ್ಥಾನವನ್ನು ಗಳಿಸುತ್ತಾರೆ.

2. ಕಮಲಾದೇವಿ ಸ್ವಾತಂತ್ರ್ಯೋತ್ತರ ಭಾರತದ ಅಧಿಕಾರ ನಿರಪೇಕ್ಷ ನೆಲೆಯ ಪರ್ಯಾಯ ರಾಜಕಾರಣದ ಒಂದು ವಿಶಿಷ್ಟ ಅಭಿವ್ಯಕ್ತಿ. ಅವರ ಕ್ರಿಯಾಶೀಲತೆಯನ್ನು ನಾವು ಸಂಸ್ಕೃತಿ ನಿಹಿತ

ಸಮಾಜಮುಖಿ ಕ್ರಿಯಾಶೀಲತೆ ಎಂದು ಪರಿಗಣಿಸಬಹುದು. ಅಂತೆಯೇ, ಅವರನ್ನು ಭಾರತದ ಮೇರುಪಂಕ್ತಿಯ ಸಾರ್ವಜನಿಕ ಬುದ್ಧಿಜೀವಿ ಎಂದೂ ಕರೆಯಬಹುದು.

3. ಕಮಲಾದೇವಿಯವರು ಓರ್ವ ಕಾಸ್ಮೋಪೊಲಿಟನ್(ವಿಶ್ವಾತ್ಮಕತೆ) ಸಂವೇದನೆಯ ಚಿಂತಕಿ. ಆದರೆ ಅವರ ಈ ವಿಶ್ವಾತ್ಮಕತೆ ಅವರು ಬಾಳಿ ಬದುಕಿದ ಪ್ರಾದೇಶಿಕ ಬದುಕಿನ ನಿರ್ದಿಷ್ಟತೆಯಲ್ಲಿ ರೂಪುಗೊಂಡಿದೆ. ಹಾಗಾಗಿಯೇ, ಮಂಗಳೂರಿನ ಅವರ ಬಾಲ್ಯ ಜೀವನದ ಸ್ಥಾನೀಯ ಚಹರೆಗಳು ಅವರ ಚಿಂತನೆಯ ವಿನ್ಯಾಸಗಳಲ್ಲಿ ಸ್ಥಾನಪಡೆಯುತ್ತವೆ ಅಥವಾ ಕಮಲಾದೇವಿಯವರ ವಿಶ್ವ ಮಂಗಳೂರಿನ ನೆಲದಿಂದ ಚಿಗುರೊಡೆದಿದೆ.

ಅಧ್ಯಯನ ಕ್ರಮ

ಪ್ರಸ್ತುತ ಅಧ್ಯಯನ ಮೂಲತ: ತಾತ್ತ್ವಿಕ ಅಥವಾ ವಿಶ್ಲೇಷಣಾತ್ಮಕ ಸ್ವರೂಪದ್ದು. ಆಧುನಿಕ ಭಾರತದ ರಾಜಕೀಯ ಚಿಂತನೆ ಎನ್ನುವ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಈ ಸಂಶೋಧನೆ ಅನಾವರಣಗೊಳ್ಳುತ್ತದೆ. ಹಾಗಿದ್ದೂ, ಈ ಅಧ್ಯಯನದಲ್ಲಿ ಎಂಪಿರಿಕಲ್ ಆಯಾಮಗಳು ಇಲ್ಲವೆಂದಲ್ಲ. ಕಮಲಾದೇವಿಯವರ ಬದುಕಿನ ಅನೇಕ ಪ್ರಮುಖ ಅಂಶಗಳನ್ನು ಈ ಅಧ್ಯಯನ ಎಂಪಿರಿಕಲ್ ನೆಲೆಯಿಂದಲೇ ಗಳಿಸಿಕೊಂಡಿದೆ ಎನ್ನಬಹುದು. ಕಮಲಾದೇವಿಯವರನ್ನು ಬಲ್ಲ ಅಥವಾ ಅವರ ಬದುಕಿನ ವಿವರಗಳನ್ನು ಹತ್ತಿರದಿಂದ ಗಮನಿಸಿದ ಅನೇಕರಿಂದ ಈ ಸಂಶೋಧನೆ ಮಾಹಿತಿಗಳನ್ನು ಪಡೆದುಕೊಂಡಿದೆ. ಆದರೆ ಕಮಲಾದೇವಿಯವರ ಚಿಂತನೆ ಮತ್ತು ಸಾಧನೆಗಳನ್ನು ವಿಮರ್ಶಾತ್ಮಕವಾಗಿ ಪ್ರಸ್ತುತಪಡಿಸುವ ಈ ಅಧ್ಯಯನದ ವೈಧಾನಿಕ ನೆಲೆಗಟ್ಟು ಪಠ್ಯ ಸ್ವರೂಪದ್ದು. ಆದ್ದರಿಂದ, ಇಲ್ಲಿನ ವಿಧಾನ ಕ್ರಮ ಪಠ್ಯ ವಿಶ್ಲೇಷಣೆಯ ನೆಲೆಯಿಂದ ರೂಪುಗೊಂಡದ್ದು.

ಪಠ್ಯ ವಿಶ್ಲೇಷಣೆಯ ಬಗೆಗಿನ ಮೇಲಿನ ಮಾತುಗಳನ್ನು ಮುಂದಿಡುವಾದ ಪಠ್ಯ ವಿಶ್ಲೇಷಣೆಗೆ ಸಂಬಂಧಿಸಿದ ಅನೇಕ ತಾತ್ತ್ವಿಕ ಪ್ರತಿಪಾದನೆಗಳನ್ನು ಹಾಗೂ ವೈಧಾನಿಕ ಸವಾಲುಗಳನ್ನು ಈ ಅಧ್ಯಯನ ತನ್ನ ಗಮನದಲ್ಲಿ ಇರಿಸಿಕೊಂಡಿದೆ. ರಾಜಕೀಯ ಚಿಂತನೆಯ ಬಗೆಗಿನ ಅನೇಕ ಸಂಶೋಧಕರ ಪ್ರಕಾರ ಪಠ್ಯ ತನ್ನಲ್ಲಿಯೇ ಸ್ವತಂತ್ರವಾದ ಘಟಕವಲ್ಲ. ಅದು ನಿರ್ವಾತದಲ್ಲಿ ಸೃಷ್ಟಿಯಾದ ವಸ್ತುವೂ ಅಲ್ಲ. ಪ್ರತಿಯೊಂದು ಪಠ್ಯವೂ ತನ್ನ ದೇಶ ಕಾಲದ ಅನೇಕ ಆತಂಕ ಹಾಗೂ ಆಕಾಂಕ್ಷೆಗಳನ್ನು ತನ್ನ ಸ್ವರೂಪಕ್ಕೆ ಅನುಗುಣವಾಗಿ ಬಿಂಬಿಸುತ್ತದೆ ಅಥವಾ ಪ್ರತಿಬಿಂಬಿಸುತ್ತದೆ. ಅಂತೆಯೇ, ಪಠ್ಯ ಮತ್ತು ಅದನ್ನು ರಚಿಸಿದ ಕೃತಿಕಾರ ಇವುಗಳ ನಡುವೆಯೂ ದ್ವಂದ್ವಗಳಿಂದ ಕೂಡಿದ ಸಂಬಂಧವಿದೆ. ಹಾಗಾಗಿ, ಕೃತಿ ಕೃತಿಕಾರ ಹಾಗೂ ಅದು ರಚಿತಗೊಂಡ ಕಾಲದೇಶಗಳ ವಿಸ್ತಾರವಾದ ಪರಿಪ್ರೇಕ್ಷ್ಯದಲ್ಲಿ ಪಠ್ಯಗಳ ಅಧ್ಯಯನ ನಡೆಯಬೇಕು ಎನ್ನುವ

ವೈಧಾನಿಕ ಅರಿವಿನಲ್ಲಿ ಈ ಅಧ್ಯಯನ ಕಮಲಾದೇವಿಯವರ ಕೃತಿಗಳು, ಅವರ ಜೀವನ ವೃತ್ತಾಂತಗಳು ಹಾಗೂ ಇತರ ವಿಮರ್ಶಾತ್ಮಕ ಲೇಖನಗಳನ್ನು ಒಂದು ಸಹಸಂಬಂಧದಲ್ಲಿ ಗಮನಿಸಿದೆ.

ಮೇಲಿನ ನಿರೂಪಣೆಯನ್ನು ಇನ್ನೂ ಸ್ಪಷ್ಟವಾದ ಮಾತುಗಳಲ್ಲಿ ಮತ್ತೆ ಮುಂದಿಡುವುದಾದರೆ ಕಮಲಾದೇವಿಯವರ ಸಾರ್ವಜನಿಕ ಜೀವನದ ಕಾಲಘಟ್ಟ, ಅವರು ಬದುಕಿದ ಸಮಾಜದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ನಿರ್ದಿಷ್ಟತೆ ಹಾಗೂ ಇವುಗಳ ನಡುವಿನ ಇಂಟರ್ ಟೆಕ್ಷುವಲ್ ಸಹಸಂಬಂಧವನ್ನು ಪರಿವೀಕ್ಷಿಸುವ ಸಾಹಸವನ್ನು ಈ ಅಧ್ಯಯನ ನಡೆಸುತ್ತದೆ. ಈ ಸಂಶೋಧನೆ ತನ್ನ ವಿಶ್ಲೇಷಣೆಗೆ ಒಳಪಡಿಸಿದ ಪಠ್ಯಗಳನ್ನು ಎರಡು ರೀತಿಯಾಗಿ ವಿಂಗಡಿಸುತ್ತದೆ.

1. ಪ್ರಾಥಮಿಕ ಪಠ್ಯಗಳು
2. ಅನುಷಂಗಿಕ ಪಠ್ಯಗಳು

1. ಪ್ರಾಥಮಿಕ ಪಠ್ಯಗಳು:

ಕಮಲಾದೇವಿಯವರ ಆತ್ಮಚರಿತ್ರೆ, ಅವರು ಬರೆದ ಪ್ರಮುಖ ಪುಸ್ತಕಗಳು, ಬಿಡಿ ಲೇಖನಗಳು, ಪತ್ರಗಳು ಮತ್ತು ಲಭ್ಯವಿರುವ ಇತರ ಯಾವುದೇ ಲಿಖಿತ ದಾಖಲೆಗಳು ಈ ಅಧ್ಯಯನದ ಪ್ರಾಥಮಿಕ ಪಠ್ಯಗಳಾಗಿರುತ್ತದೆ.

2. ಅನುಷಂಗಿಕ ಪಠ್ಯಗಳು:

ಕಮಲಾದೇವಿಯವರ ಜೀವನ ಚರಿತ್ರೆಗಳು, ವಿಮರ್ಶಾತ್ಮಕ ಬರಹಗಳು, ವೈಯಕ್ತಿಕ ಟಿಪ್ಪಣಿಗಳು, ಲೇಖನಗಳು, ಸಂಶೋಧನಾ ಅಧ್ಯಯನಗಳು ಮತ್ತು ಅವರ ಬಗೆಗಿನ ಇತರ ಯಾವುದೇ ದಾಖಲೆಗಳು ಈ ಅಧ್ಯಯನದ ಅನುಷಂಗಿಕ ಪಠ್ಯಗಳಾಗಿರುತ್ತದೆ.

ಸಾಹಿತ್ಯ ಸಮೀಕ್ಷೆ

- **Chattopadhyaya, Kamaladevi. *Indian Women's Battle for Freedom*. Abhinav Publications, New Delhi, 1982.**

1982ರಲ್ಲಿ ಕಮಲಾದೇವಿಯವರು ಬರೆದ ಈ ಗ್ರಂಥ ಬೇರೆ ಬೇರೆ ಕಾಲಘಟ್ಟಗಳಲ್ಲಿ ಭಾರತದ ಮಹಿಳೆಯರು ಎದುರಿಸಿದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತದೆ. ಈ ಸಮಸ್ಯೆಗಳಿಗೆ ದೊರೆತ ಪ್ರತಿಸ್ಪಂದನೆಗಳನ್ನು ಮತ್ತು ಸಮಾಜ ಸುಧಾರಣಾ ಪ್ರಯತ್ನಗಳನ್ನು ಅವರು ಇಲ್ಲಿ ವಿಸ್ತೃತವಾಗಿ ವಿವರಿಸುತ್ತಾರೆ. ವೇದಗಳ ಕಾಲದಲ್ಲಿ ಭಾರತದ ಮಹಿಳೆಯರ ಸ್ಥಾನಮಾನ, ನಂತರದಲ್ಲಿ ಸಾಮಾಜಿಕ ಕಟ್ಟುಪಾಡುಗಳಿಂದ ಬಂಧಿತಳಾದ ಮಹಿಳೆ, ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದ ಮಹಿಳೆಯರ ಸ್ಥಿತಿಗತಿಗಳನ್ನು ವಿವರಿಸುವ ಈ ಗ್ರಂಥ ಭಾರತದ ಎಲ್ಲ ಸಮಾಜ ಮತ್ತು ಸಮುದಾಯಗಳ ಮಹಿಳೆಯರ ಸಾಮಾಜಿಕ ಬದುಕಿನ ಚಿತ್ರಣವನ್ನು ನೀಡುವ ಪ್ರಯತ್ನವನ್ನು ಮಾಡುತ್ತದೆ.

- **Kamaladevi, Chattopadhyay. "Handicrafts of India."** ***Indian Council of Cultural Relations*, New Delhi, 1975.**

ಕಮಲಾದೇವಿಯವರು ಸ್ವಾತಂತ್ರ್ಯ ನಂತರದ ಭಾರತದಲ್ಲಿ ಹಸ್ತಕಲೆಯ ಪುನಶ್ಚೇತನದ ಪ್ರಯತ್ನಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದ ಸಂದರ್ಭದಲ್ಲಿ ಬರೆದ ಈ ಗ್ರಂಥ ಭಾರತದ ಹಸ್ತಕಲಾ ವೈವಿಧ್ಯಗಳ ಬಗೆಗಿನ ವಿಸ್ತೃತವಾದ ಸಂಕಲನವನ್ನು ಓದುಗರ ಮುಂದಿಡುತ್ತದೆ. ಭಾರತದ ವಿಭಿನ್ನ ಪ್ರದೇಶಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ವ್ಯಕ್ತಗೊಳ್ಳುವ ಸರಳ ಹಸ್ತಕಲೆಯ ಮಾದರಿಯಿಂದ ಹಿಡಿದು ಶ್ರೀಮಂತ ಮತ್ತು ವಿಶಿಷ್ಟ ಕಲಾಪ್ರಕಾರಗಳ ವಿವರಣೆಗಳನ್ನು ಒಳಗೊಂಡ ಈ ಗ್ರಂಥವನ್ನು ಇಂದು ನಮ್ಮಲ್ಲಿ ಅಳಿವಿನಂಚಿನಲ್ಲಿರುವ ಹಸ್ತ ಕಲಾ ಪ್ರಕಾರಗಳನ್ನು ಪೋಷಿಸುವ ಸಲುವಾಗಿ ಇರುವ ಒಂದು ಮಹತ್ವದ ದಾಖಲೆ ಎನ್ನಬಹುದು. ಹಸ್ತಕಲೆಯ ಕುರಿತಾದ ಈ ಗ್ರಂಥದ ಪ್ರಸ್ತಾವನೆಯಲ್ಲಿ ಕಮಲಾದೇವಿಯವರು ಯಾಕೆ ಹಸ್ತಕಲೆ ಎನ್ನುವ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಭಾರತದ ವಿಭಿನ್ನ ಪರಂಪರೆಗಳ ಭಾಗವಾಗಿದ್ದ ಹಸ್ತಕಲೆಯ ಪ್ರಕಾರಗಳನ್ನು ಓದುಗರ ಮುಂದಿಡುತ್ತಾರೆ.

- **Chattopadhyaya, Kamaladevi. *Tribalism in India*. Humanities Press, New Delhi, 1978.**

ಸ್ವಾತಂತ್ರ್ಯ ನಂತರದ ಕಮಲಾದೇವಿಯವರ ರಾಜಕೀಯ ಕ್ರಿಯಾಚರಣೆಯಲ್ಲಿ ವ್ಯಕ್ತಗೊಂಡ ಮಹತ್ವದ ಕೃತಿ ಇದಾಗಿದೆ. ಬುಡಕಟ್ಟು ಸಮುದಾಯಗಳ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಂಪ್ರದಾಯಿಕ, ಆರ್ಥಿಕ, ಚಹರೆಗಳನ್ನು ತಮ್ಮ ಕೃತಿಯಲ್ಲಿ ಚಿತ್ರಿಸುವ ಕಮಲಾದೇವಿಯವರು ದಟ್ಟ ಅರಣ್ಯಗಳಲ್ಲಿ ಮತ್ತು ನಗರಗಳ ಅಂಚಿನಲ್ಲಿ ವಾಸಮಾಡುವ ಬುಡಕಟ್ಟು ಸಮುದಾಯಗಳ

ಸಂಸ್ಕೃತಿಯಲ್ಲಿ ವ್ಯಕ್ತಗೊಳ್ಳುವ ಹಸ್ತಕೌಶಲ್ಯಗಳು ಮತ್ತು ಆಚರಣೆಗಳನ್ನು ಈ ಗ್ರಂಥದಲ್ಲಿ ದಾಖಲಿಸುವ ಪ್ರಯತ್ನವನ್ನು ಮಾಡುತ್ತಾರೆ. ಭಾರತದ ಬುಡಕಟ್ಟು ಸಮುದಾಯಗಳ ವಿಶ್ವದೃಷ್ಟಿಯನ್ನು ಮರುದಾಖಲಿಸುವ ಕಮಲಾದೇವಿಯವರು ಬುಡಕಟ್ಟು ಸಮುದಾಯವನ್ನು ಭಾರತದ ಸಂಸ್ಕೃತಿಯ ವಿಶಿಷ್ಟ ಭಾಗವನ್ನಾಗಿ ಗ್ರಹಿಸುತ್ತಾರೆ.

- **Chattopadhyaya, Kamaladevi.** ***Inner Recesses, Outer Spaces: Memoirs*****. Navrang Publications, New Delhi, 1986.**

  ತಮ್ಮ ಬದುಕಿನ ಕೊನೆಯ ದಿನಗಳಲ್ಲಿ ಕಮಲಾದೇವಿಯವರು ಬರೆದ ಆತ್ಮಚರಿತ್ರೆ ಅವರ ಬದುಕಿನ ಅತ್ಯಂತ ಪ್ರಮುಖ ಆಯಾಮವಾದ ಸಾರ್ವಜನಿಕ ಅಸ್ಮಿತೆಯ ರೂಪುರೇಷೆಗಳನ್ನು ನಮ್ಮ ಮುಂದಿಡುತ್ತದೆ. ತಮ್ಮ ವೈಯಕ್ತಿಕ ಬದುಕಿನ ನೋವುಗಳು ಅವರ ಸಾರ್ವಜನಿಕ ಬದುಕಿನ ಕಾರ್ಯಪ್ರಪಂಚವನ್ನು ಸ್ಪರ್ಶಿಸದಂತೆ ಯಾವತ್ತೂ ಎಚ್ಚರ ವಹಿಸಿದ್ದ ಕಮಲಾದೇವಿಯವರು ತಮ್ಮ ಆತ್ಮಚರಿತ್ರೆಯಲ್ಲೂ ಅದೇ ಅಂತರವನ್ನು ಕಾಯ್ದುಕೊಂಡಿದ್ದಾರೆ ಎನ್ನಬಹುದು. ಒಂದು ಅರ್ಥದಲ್ಲಿ ಕಮಲಾದೇವಿಯವರ ಈ ಆತ್ಮಚರಿತ್ರೆ ಅವರ ಸಾರ್ವಜನಿಕ ಬದುಕಿನ ಸಾಧನೆಗಳ ದಾಖಲಾತಿಯೇ ಹೊರತು ಅವರ ವೈಯಕ್ತಿಕ ಬದುಕಿನ ನಿರೂಪಣೆಯಲ್ಲ. ಆದ್ದರಿಂದ, ಕಮಲಾದೇವಿಯವರ ಈ ಆತ್ಮಚರಿತ್ರೆ ವೈಯಕ್ತಿಕ ಹಾಗೂ ಸಾರ್ವಜನಿಕ ಎನ್ನುವ ಪ್ರತ್ಯೇಕತೆಗಳ ಮೇಲೆ ನೆಲೆ ನಿಂತ ಆಧುನಿಕ ರಾಜಕೀಯ ಮನೋಭಾವದ ಅತ್ಯಂತ ಸೂಕ್ತ ನಿದರ್ಶನವಾಗಿ ಕಾಣಿಸುತ್ತದೆ.

ಅನುಷಂಗಿಕ ಪಠ್ಯಗಳು:

- **Brijbhushan, Jamila.** ***Kamaladevi Chattopadhyaya: Portrait of a Rebel*****. Abhinav Publications, New Delhi, 1976.**

  ಜಮೀಲಾ ಬ್ರಿಜ್‌ಭೂಷಣ್‌ರವರ ಈ ಕೃತಿ ಕಮಲಾದೇವಿಯವರ ಬದುಕು, ಬರಹ ಮತ್ತು ಕ್ರಿಯಾಚರಣೆಗಳನ್ನು ಒಳಗೊಂಡ ಮೊದಲ ಜೀವನ ಚರಿತ್ರೆ. ಕಮಲಾದೇವಿಯವರ ಜೊತೆಗಿನ ಎರಡು ದಶಕಗಳ ಒಡನಾಟದಲ್ಲಿ ವ್ಯಕ್ತಗೊಂಡ ಈ ಜೀವನ ಚರಿತ್ರೆ ಅವರ ಬದುಕಿನ ಹಲವು ಮಜಲುಗಳನ್ನು ಓದುಗರಿಗೆ ತೆರೆದಿಡುತ್ತದೆ. ಏಳು ಅಧ್ಯಾಯಗಳನ್ನು ಒಳಗೊಂಡ ಈ ಜೀವನ ಚರಿತ್ರೆಯಲ್ಲಿ ಲೇಖಕರು ಕಮಲಾದೇವಿಯವರ ಬಾಲ್ಯದ ಬದುಕು, ರಾಜಕೀಯ ಪ್ರವೇಶದ ಸಂದರ್ಭ, ಮಹಿಳಾ ಸಮ್ಮೇಳನಗಳಲ್ಲಿ ಅವರು ತಮ್ಮನ್ನು ಗುರುತಿಸಿಕೊಂಡ ಬಗೆ, ರಾಷ್ಟ್ರೀಯ ಹೋರಾಟದ ಕಾಲಘಟ್ಟ, 1939–41ರ ಕಮಲಾದೇವಿಯವರ ವಿದೇಶಿ ಪ್ರವಾಸ ಮತ್ತು ಅವರ ಬಹುಮುಖಿ ವ್ಯಕ್ತಿತ್ವದ ಪ್ರಮುಖ ಚಹರೆಗಳನ್ನು ನಿರೂಪಿಸುವ ಪ್ರಯತ್ನವನ್ನು ಮಾಡುತ್ತಾರೆ.

ಈ ಕೃತಿಯನ್ನು ಬರೆಯುವಾಗ ಲೇಖಕರು ಕಮಲಾದೇವಿಯವರ ಜೊತೆಗಿನ ಎರಡು ದಶಕಗಳ ಒಡನಾಟವನ್ನು ಹಿನ್ನೆಲೆಯಾಗಿಟ್ಟುಕೊಂಡು ಅವರ ಬರಹಗಳನ್ನು, ಪತ್ರಗಳನ್ನು ಮತ್ತು ವಿಮರ್ಶಾ ಬರಹಗಳನ್ನು ಪರಮರ್ಶಿಸುತ್ತಾರೆ. ತಮ್ಮ ಕೃತಿಗೆ ಸಂಶೋಧನಾ ಕೃತಿಯ ರೂಪವನ್ನು ನೀಡದೆ ಸರಳ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವ ಲೇಖಕರು ಬದಲಾಗಿ ಪುಸ್ತಕದ ಕೊನೆಯಲ್ಲಿ ಎಲ್ಲಾ ಆಕರ ಗ್ರಂಥಗಳ ಅಡಿಟಿಪ್ಪಣಿಗಳನ್ನು ಒದಗಿಸುತ್ತಾರೆ. ಜಮೀಲಾರವರು ಕಮಲಾದೇವಿಯವರನ್ನು ಧೈರ್ಯಶಾಲಿ ಮತ್ತು ತನಗೆ ಅನಿಸಿದ್ದನ್ನು ಹೇಳುವ ಮತ್ತು ಮಾಡಬಲ್ಲ ಅಪ್ರತಿಮ ಮಹಿಳೆಯೆಂದು ಈ ಕೃತಿಯಲ್ಲಿ ಚಿತ್ರಿಸುತ್ತಾರೆ.

- **Nanda, Reena. *Kamaladevi Chattopadhyaya: A Biography*. Oxford University Press, New Delhi, 2002.**

ಕಮಲಾದೇವಿಯವರ ಬದುಕು, ಬರಹ ಮತ್ತು ಕ್ರಿಯಾಚರಣೆಗಳ ವಿಮರ್ಶಾತ್ಮಕ ಅಧ್ಯಯನವನ್ನು ನಡೆಸುವ ಈ ಕೃತಿಯಲ್ಲಿ ರೀನಾ ನಂದಾರವರು ಕಮಲಾದೇವಿಯವರ ಮೂಲ ಗ್ರಂಥಗಳನ್ನು, ಲೇಖನಗಳನ್ನು, ಭಾಷಣಗಳನ್ನು ಮತ್ತು ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಪತ್ರಗಳನ್ನು ಅವಲೋಕಿಸಿ ಅವರ ಚಿಂತನೆ ಮತ್ತು ಕ್ರಿಯಾಚರಣೆಗಳ ಒಂದು ವಿಮರ್ಶಾತ್ಮಕ ನೋಟವನ್ನು ಮುಂದಿಡುತ್ತಾರೆ. ಕಮಲಾದೇವಿಯವರನ್ನು ರಾಜಕೀಯ ಮತ್ತು ಕಲೆಯನ್ನು ಸಮನಾಗಿ ಕಾಣುವ ಅಪರೂಪದ ಮಹಿಳೆಯೆಂದು ಚಿತ್ರಿಸುವ ಲೇಖಕರು ಅವರ ಹಸ್ತಕಲೆಯ ಪುನಶ್ಚೇತನದ ಪ್ರಯತ್ನ ನಿರಾಶ್ರಿತರ ಬದುಕಿನ ಮರುಸಂಘಟನೆ. ಸಹಕಾರಿ ತತ್ತ್ವದ ಪ್ರಯೋಗಗಳನ್ನು ವಿಮರ್ಶಾತ್ಮಕವಾಗಿ ವಿವರಿಸುತ್ತಾರೆ. ತಮ್ಮ ಕೃತಿಯನ್ನು ಕಮಲಾದೇವಿಯವರ ಜೀವನದ ಘಟನಾವಳಿಗಳನ್ನು ವ್ಯಕ್ತಪಡಿಸುವ ದಾಖಲೆಯನ್ನಾಗಿಸದೆ ಅವರು ಬದುಕಿದ ಕಾಲಘಟ್ಟ, ಭಾರತದ ರಾಷ್ಟ್ರೀಯ ಅಂದೋಲನ, ಸಮಾಜವಾದಿ ಪಕ್ಷದ ಉಗಮ ಮತ್ತು ಸ್ವಾತಂತ್ರ್ಯ ನಂತರದ ಭಾರತದ ಎದುರುಗೊಂಡ ಸಂಧ್ಧಿಗತೆಯ ಬಗ್ಗೆ ಲೇಖಕರು ಕಮಲಾದೇವಿಯವರ ಜೀವನ ವೃತ್ತಾಂತವನ್ನು ಮುಂದಿಡುತ್ತಾರೆ. ಕಮಲಾದೇವಿಯವರ ಬರಹಗಳನ್ನು, ಭಾಷಣಗಳನ್ನು, ವಿಮರ್ಶಾ ಗ್ರಂಥಗಳನ್ನು ಮತ್ತು ಸಮಾಜವಾದಿ ಪಕ್ಷದ ಸಮಿತಿ ಸಭೆಯ ನಡಾವಳಿಗಳನ್ನು ಸಂಗ್ರಹಿಸಿ ಉಲ್ಲೇಖಿಸಿದ ಈ ಕೃತಿಯನ್ನು ಒಂದು ಉತ್ತಮ ಸಂಶೋಧಿತ ಗ್ರಂಥವೆನ್ನಬಹುದು.

- **Narasimhan, Sakuntala. *Kamaladevi Chattopadhyay: The Romantic Rebel*. Sterling Publishers Pvt. Ltd, New Delhi, 1999.**

ಶಕುಂತಲಾ ನರಸಿಂಹನ್‌ರವರು ಬರೆದ ಈ ಕೃತಿ ಕಮಲಾದೇವಿಯವರ ಇತರ ಜೀವನ ಚರಿತ್ರೆಗಳಿಗಿಂತ ವಿಭಿನ್ನ ರೀತಿಯ ನಿರೂಪಣೆಗಳಿಂದ ಕೂಡಿದ ಕೃತಿ ಎನ್ನಬಹುದು. ಒಂಭತ್ತು ಅಧ್ಯಾಯಗಳನ್ನು ಹೊಂದಿರುವ ಈ ಕೃತಿಯಲ್ಲಿ ಲೇಖಕರು ಸುಮಾರು ಮೂವತ್ತಕ್ಕೂ ಹೆಚ್ಚು ಜನರನ್ನು ಸಂದರ್ಶಿಸಿ ಅವರ ಅನುಭವಗಳ ಆಧಾರದಲ್ಲಿ ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ವಿಶ್ಲೇಷಣೆಯನ್ನು ಮಾಡುತ್ತಾರೆ. ಪ್ರತಿ ಅಧ್ಯಾಯಗಳಲ್ಲಿ ತಾವು ನಡೆಸಿದ ಸಂದರ್ಶನದ ತುಣುಕುಗಳನ್ನು ನವಿರಾಗಿ ಪೋಣಿಸುವ ಲೇಖಕರು ಕಮಲಾದೇವಿಯವರ ಬದುಕಿನ ವಿವಿಧ ಆಯಾಮಗಳನ್ನು ಈ ಕೃತಿಯಲ್ಲಿ ಚರ್ಚಿಸುತ್ತಾರೆ.

- **Guha, Ramachandra, ed.** ***Makers of Modern India*****. Harvard University Press, New Delhi, 2011.**

ರಾಮಚಂದ್ರ ಗುಹಾರವರು ಸಂಪಾದಿಸಿರುವ 'ಆಧುನಿಕ ಭಾರತವನ್ನು ಕಟ್ಟಿದವರು' ಎನ್ನುವ ಕೃತಿಯಲ್ಲಿ ಕಮಲಾದೇವಿಯವರ ಆಯ್ದ ಬರಹಗಳನ್ನು ಒಳಗೊಂಡ ಒಂದು ಪ್ರತ್ಯೇಕ ಅಧ್ಯಾಯವಿದೆ. ಆಧುನಿಕ ಭಾರತವನ್ನು ಕಟ್ಟಿದ ಮಹಾನ್ ನಾಯಕರ ಸಾಲಿಗೆ ಕಮಲಾದೇವಿಯವರನ್ನು ಸೇರಿಸುವ ಮೂಲಕ ರಾಮಚಂದ್ರ ಗುಹಾ ಆಧುನಿಕ ಭಾರತದ ಬೌದ್ಧಿಕ ಚರಿತ್ರೆಯಲ್ಲಿ ಅವರಿಗೆ ಮಹತ್ವದ ಸ್ಥಾನವನ್ನು ಒದಗಿಸುತ್ತಾರೆ. ಕಮಲಾದೇವಿಯವರ ಆಯ್ದ ಬರಹಗಳನ್ನು ಒಳಗೊಂಡ ಭಾಗಕ್ಕೆ ಒದಗಿಸಿದ ಮುನ್ನುಡಿಯಲ್ಲಿ ಗುಹಾರವರು ಕಮಲಾದೇವಿಯವರನ್ನು ಭಾರತದ ಪ್ರಪ್ರಥಮ ಸಮಾಜವಾದಿ ನಾರಿವಾದಿಯೆಂದು ಬಣ್ಣಿಸುತ್ತಾರೆ ಮತ್ತು ಅವರ ಕ್ರಿಯಾಶೀಲತೆಯನ್ನು ಮುಕ್ತ ಕಂಠದಿಂದ ಪ್ರಶಂಶಿಸುತ್ತಾರೆ.

- **DuBois, Ellen Carol, and Vinay Lal, eds.** ***A Passionate Life: Writings by and on Kamaladevi Chattopadhyay*****. Zubaan, New Delhi, 2017.**

ಎಲೆನ್ ದುಬೆ ಮತ್ತು ವಿನಯ್ ಲಾಲ್‌ರವರು ಸಂಪಾದಿಸಿದ ಈ ಕೃತಿ ಕಮಲಾದೇವಿಯವರ ಬಗ್ಗೆ ಪ್ರಕಟಗೊಂಡ ಪ್ರಮುಖ ಗ್ರಂಥಗಳಲ್ಲಿ ಒಂದು. ಈ ಕೃತಿಯ ಮೊದಲ ಭಾಗದಲ್ಲಿ ಸಂಪಾದಕರು ಕಮಲಾದೇವಿಯವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳನ್ನು ಮತ್ತು ಭಾಷಣಗಳನ್ನು ಹತ್ತು ವಿಭಾಗಗಳಾಗಿ ವಿಂಗಡಿಸಿ ಅವರ ಚಿಂತನೆಗಳ ಬಹುರೂಪತೆಯನ್ನು ಓದುಗರಿಗೆ ಪರಿಚಯಿಸುತ್ತಾರೆ. ಗ್ರಂಥದ ಎರಡನೇ ಭಾಗದಲ್ಲಿ ಕಮಲಾದೇವಿಯವರ ಚಿಂತನೆ ಮತ್ತು

ಕ್ರಿಯಾಚರಣೆಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ನಡೆಸಿದ ಆಯ್ದ ಪ್ರಮುಖ ಲೇಖನಗಳನ್ನು ಒಳಗೊಂಡಿದೆ.

ಎಲೆನ್ ದುಬೆಯವರು ಕಮಲಾದೇವಿಯವರ ಮಹಿಳಾವಾದಿ ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ಒಳಗೊಂಡ ತಮ್ಮ ಲೇಖನವನ್ನು ತಮ್ಮ ಗ್ರಂಥದ ಪ್ರಸ್ತಾವನೆಯನ್ನಾಗಿ ಮಾಡಿರುವುದು ಈ ಗ್ರಂಥದ ವಿಶಿಷ್ಟತೆಯೆನ್ನಬಹುದು. ಕಮಲಾದೇವಿಯವರ ಮಹಿಳಾಪರ ಚಿಂತನೆಗಳನ್ನು ಒಳಗೊಂಡ ಪ್ರಥಮ ಲೇಖನ ಇದೆಂದರೆ ತಪ್ಪಾಗಲಾರದು. ಈ ಲೇಖನದಲ್ಲಿ ಕಮಲಾದೇವಿಯವರ ಸ್ತ್ರೀವಾದ ಬೇರುಗಳನ್ನು ಒಂದು ವಿಮರ್ಶಾತ್ಮಕ ಪರಿಪ್ರೇಕ್ಷ್ಯದಲ್ಲಿಟ್ಟು ಲೇಖಕರು ಅರ್ಥೈಸಿಕೊಳ್ಳಲು ಇಲ್ಲಿ ಪ್ರಯತ್ನಿಸಿದ್ದಾರೆ.

ಈ ಗ್ರಂಥದ ಇನ್ನೋರ್ವ ಸಂಪಾದಕರಾದ ವಿನಯ್ ಲಾಲ್‌ರವರು ತಮ್ಮ ಪ್ರಸ್ತಾವನೆಯ ಲೇಖನದಲ್ಲಿ ಕಮಲಾದೇವಿಯವರನ್ನು ಮೂಲಜಿಜ್ಞಾಸಿಕ ಪ್ರಜಾತಂತ್ರವಾದಿ (ರಾಡಿಕಲ್ ಡೆಮೊಕ್ರೆಟ್) ಎಂದು ಕರೆಯುತ್ತಾ ಅವರ ಚಿಂತನೆಗಳಲ್ಲಿ ಗಾಂಧಿಯ ಸಾಮೀಪ್ಯವನ್ನು ಗುರುತಿಸುವ ಪ್ರಯತ್ನವನ್ನು ಮಾಡುತ್ತಾರೆ. ಕಮಲಾದೇವಿಯವರ ಚಿಂತನೆಯಲ್ಲಿ ಜಾಗತಿಕ ದಕ್ಷಿಣ ಅನ್ನುವ ಕಲ್ಪನೆಯ ಆರಂಭಿಕ ಚಹರೆಗಳನ್ನು ಗುರುತಿಸುವ ವಿನಯ್ ಲಾಲ್ ಅವರನ್ನು ಆಧುನಿಕ ಭಾರತದ ಅತ್ಯಂತ ಪ್ರಮುಖ ಚಿಂತಕರ ಸಾಲಿಗೆ ಸೇರಿಸುತ್ತಾರೆ. ಈ ಗ್ರಂಥದ ಎರಡನೆಯ ಭಾಗದಲ್ಲಿ ಐದು ಪ್ರಮುಖ ಲೇಖನಗಳಿದ್ದು ಪ್ರತಿಯೊಂದು ಲೇಖನವು ಕಮಲಾದೇವಿಯವರ ವಿಭಿನ್ನ ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುತ್ತವೆ. ಕಮಲಾದೇವಿಯವರ ಬದುಕು ಮತ್ತು ಚಿಂತನೆಗಳಲ್ಲಿ ಅಧ್ಯಯನ ನಡೆಸುವ ಸಂಶೋಧಕರಿಗೆ ಈ ಪುಸ್ತಕ ಒಂದು ಸೂಕ್ತವಾದ ಪ್ರವೇಶಿಕೆ ಎನ್ನಬಹುದು.

- **ಸರೋಜಿನಿ ಶಿಂತ್ರಿ, *ನಾನೊಂದು ಕನಸು ಕಂಡೆ (ಕಮಲಾದೇವಿಯವರ ಜೀವನ ಚರಿತ್ರೆ)*, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, 1981**

ಸರೋಜಿನಿ ಶಿಂತ್ರಿಯವರ "ನಾನೊಂದು ಕನಸು ಕಂಡೆ" ಎನ್ನುವ ಕೃತಿ ಕಮಲಾದೇವಿಯವರ ಬಗ್ಗೆ ಕನ್ನಡದಲ್ಲಿ ಪ್ರಕಟಗೊಂಡ ಮೊದಲ ಜೀವನ ಚರಿತ್ರೆ. ಹಿಂದಿಯಲ್ಲಿ ಕಮಲಾರತ್ನಂರವರು ಬರೆದ ಕಮಲಾದೇವಿಯವರ ಜೀವನ ಚರಿತ್ರೆ ಅಕ್ಕಮಹಾದೇವಿಯವರ ವಚನಗಳ ಸಾಲುಗಳಲ್ಲಿ ಆರಂಭವಾಗುತ್ತದೆ. ಕಮಲಾರತ್ನಂರವರ ಬರಹವನ್ನು ಓದಿದ ನಂತರದಲ್ಲಿ 'ಅಕ್ಕ ಕೇಳವ್ವ ನಾನೊಂದು ಕನಸು ಕಂಡೆ' ಅನ್ನುವ ಅಕ್ಕಮಹಾದೇವಿಯವರ ವಚನದ ಸಾಲನ್ನು ಸರೋಜಿನಿ ಶಿಂತ್ರಿಯವರು ತಮ್ಮ

ಕೃತಿಯ ಶೀರ್ಷಿಕೆಯನ್ನಾಗಿ ತೆಗೆದುಕೊಳ್ಳುತ್ತಾರೆ. ಕಮಲಾರತ್ನಂ ಮತ್ತು ಜಮೀಲಾ ಬ್ರಿಜ್ ಭೂಷಣ್‌ರವರು ಬರೆದ ಜೀವನ ಚರಿತ್ರೆಯನ್ನು ಆಧರಿಸಿ ಬರೆದ ಈ ಕೃತಿ ಕಮಲಾದೇವಿಯವರ ವೈಯಕ್ತಿಕ ಬದುಕಿನ ಹಲವು ದೃಷ್ಟಾಂತಗಳನ್ನು ಒಳಗೊಂಡಿವೆ. ಕಮಲಾದೇವಿಯವರ ಜೊತೆಗೆ ಲೇಖಕರು ನಡೆಸಿದ ಸಂವಾದದ ಮಾತುಗಳು ಮತ್ತು ಹರೀಂದ್ರನಾಥ ಚಟ್ಟೋಪಾಧ್ಯಾಯ ಬರೆದ ಆತ್ಮಚರಿತ್ರೆ 'Life and Myself'ನ ಆಯ್ದ ಭಾಗಗಳನ್ನು ಕಮಲಾದೇವಿಯವರ ಸಾಂಸಾರಿಕ ಬವಣೆಗಳನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಲೇಖಕರು ತಮ್ಮ ಕೃತಿಯ ಹಲವು ಅಧ್ಯಾಯಗಳಲ್ಲಿ ಸಂದರ್ಭಕ್ಕೆ ಅನುಸಾರವಾಗಿ ಉಪಯೋಗಿಸಿರುವುದು ಈ ಕೃತಿಯ ವಿಶೇಷತೆ ಎನ್ನಬಹುದು. ಸರೋಜಿನಿ ಶಿಂತ್ರಿಯವರ ಈ ಕೃತಿ ಪ್ರಕಟವಾದ ನಂತರದಲ್ಲಿ ಕನ್ನಡದಲ್ಲಿ ಬಂದ ಎಲ್ಲಾ ಜೀವನ ಚರಿತ್ರೆಗಳು ಹರೀಂದ್ರನಾಥರ ಆತ್ಮಕತೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಕಮಲಾದೇವಿಯವರ ವೈಯಕ್ತಿಕ ಬದುಕಿನ ವಿವರಣೆಗಳನ್ನು ಒಳಗೊಳ್ಳುತ್ತದೆ.

ಸಂಶೋಧನೆಯ ಅಧ್ಯಾಯಗಳು

ಪ್ರಸ್ತುತ ಅಧ್ಯಯನ ಒಟ್ಟು ಐದು ಅಧ್ಯಾಯಗಳನ್ನು ಒಳಗೊಂಡಿದೆ.

ಅಧ್ಯಾಯ 1: ಪ್ರಸ್ತಾವನೆ

ಕಮಲಾದೇವಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳ ಕುರಿತಾದ ಈ ಮಹಾಪ್ರಬಂಧದ ಮೊದಲ ಅಧ್ಯಾಯದಲ್ಲಿ ಹತ್ತೊಂಬತ್ತು ಹಾಗೂ ಇಪ್ಪನೆಯ ಶತಮಾನದ ಭಾರತ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಅಥವಾ ಚಳುವಳಿಗಳಿಗೆ ತೆರೆದುಕೊಂಡ ಬಗೆಯನ್ನು ವಿವರಿಸುತ್ತದೆ. ವಸಾಹತುಶಾಹಿ ಆಧುನಿಕತೆ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತು ಸಮುದಾಯಗಳಲ್ಲಿ ಉಂಟುಮಾಡಿದ ಸಾಮಾಜಿಕ ಬದಲಾವಣೆಗಳಲ್ಲಿ ಮಹಿಳಾ ಪ್ರಶ್ನೆ ಬಹುಮುಖ್ಯವಾಗಿ ಗೋಚರಿಸುತ್ತದೆ. ಸುಧಾರಣೆಯ ಹೆಸರಿನಲ್ಲಿ ಬದಲಾದ ಮಹಿಳಾ ಸ್ಥಾನಮಾನಗಳ ಬಗೆಗಿನ ವಿವರಣೆಯಲ್ಲಿ ದಕ್ಷಿಣ ಕನ್ನಡದ ಸಾಮಾಜಿಕ ಬದಲಾವಣೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಅಧ್ಯಾಯ ಕಮಲಾದೇವಿಯವರನ್ನು

ಪರಿಚಯಿಸುತ್ತದೆ. ಅದರ ಜೊತೆಗೆ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಂಶೋಧನಾ ವಿಧಾನ, ಅಧ್ಯಾಯಗಳ ವಿವರ ಮತ್ತು ಸಾಹಿತ್ಯ ಸಮೀಕ್ಷೆಗಳನ್ನು ಇದು ಒಳಗೊಳ್ಳುತ್ತದೆ.

ಅಧ್ಯಾಯ–2: ಕಮಲಾದೇವಿಯವರ ಬದುಕಿನ ಬೌದ್ಧಿಕ ವೃತ್ತಾಂತ

ಈ ಮಹಾಪ್ರಬಂಧದ ಎರಡನೆಯ ಅಧ್ಯಾಯ ಕಮಲಾದೇವಿಯವರ 85 ವರುಷಗಳ ಕ್ರಿಯಾಶೀಲ ಬದುಕಿನ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ವಿಮರ್ಶಾತ್ಮಕವಾಗಿ ಮುಂದಿಡಲು ಪ್ರಯತ್ನಿಸುತ್ತದೆ. ಅವರ ಕಾರ್ಯಪ್ರಪಂಚವನ್ನು ರೂಪಿಸಿದ ಮತ್ತು ಮರುನಿರೂಪಿಸಿದ ಚಿಂತನೆಗಳನ್ನು ಹಾಗೂ ಪ್ರಭಾವಗಳನ್ನು ಕಮಲಾದೇವಿಯವರ ಜೀವನ ವೃತ್ತಾಂತದ ಹಿನ್ನೆಲೆಯಲ್ಲಿ ಈ ಅಧ್ಯಾಯ ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತದೆ. ಮಂಗಳೂರಿನ ಸಾರಸ್ವತ ಸಮುದಾಯದ ಶ್ರೀಮಂತ ಮನೆತನದ ಸಾಮಾನ್ಯ ಮಹಿಳೆಯಾಗಬಹುದಾಗಿದ್ದ ಕಮಲಾದೇವಿಯವರು ಹೇಗೆ ಒಂದು ಕಾಲಾವಧಿಯಲ್ಲಿ ದೇಶದ ಮತ್ತು ಪ್ರಪಂಚದ ಗಮನಸೆಳೆವ ಅಸಾಮಾನ್ಯ ಮಹಿಳೆಯಾಗಿ ರೂಪುಗೊಂಡರು ಅನ್ನುವುದನ್ನು ಪ್ರಸ್ತುತ ಅಧ್ಯಾಯ ಈ ಕೆಳಗಿನ ಉಪಶೀರ್ಷಿಕೆಗಳಲ್ಲಿ ಚರ್ಚಿಸಬಯಸುತ್ತದೆ.

1. ಕಮಲಾದೇವಿಯವರ ಬಾಲ್ಯ ಮತ್ತು ವೈವಾಹಿಕ ಜೀವನ
2. ರಾಷ್ಟ್ರೀಯ ಆಂದೋಲನ ಮತ್ತು ಕಮಲಾದೇವಿ
3. ಸ್ವಾತಂತ್ರ್ಯ ಹೋರಾಟ, ಗಾಂಧಿ ನಾಯಕತ್ವ ಮತ್ತು ಕಮಲಾದೇವಿ
4. ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷ ಮತ್ತು ಕಮಲಾದೇವಿ
5. ಸ್ವಾತಂತ್ರ್ಯಾ ನಂತರದ ಭಾರತ ಮತ್ತು ಕಮಲಾದೇವಿ
6. ಲೇಖಕಿಯಾಗಿ ಮತ್ತು ಚಿಂತಕಿಯಾಗಿ ಕಮಲಾದೇವಿ

ಅಧ್ಯಾಯ–3: ಕಮಲಾದೇವಿಯವರ ಚಿಂತನೆಯ ವಿವಿಧ ಆಯಾಮಗಳು ಮತ್ತು ಕ್ರಿಯಾಚರಣೆಯ ಸ್ವರೂಪ

ಈ ಮಹಾಪ್ರಬಂಧದ ಮೂರನೆಯ ಅಧ್ಯಾಯ ಕಮಲಾದೇವಿಯವರ ತಾತ್ತ್ವಿಕ ರಾಜಕೀಯ ಚಿಂತನ ಪ್ರಪಂಚದಲ್ಲಿ ವ್ಯಕ್ತಗೊಳ್ಳುವ ಐದು ಪ್ರಮುಖ ಚಿಂತನೆಯ ಎಳೆಗಳನ್ನು ಚರ್ಚಿಸುತ್ತದೆ.

1. ಕಮಲಾದೇವಿಯವರ ಬರಹ ಮತ್ತು ಕ್ರಿಯಾಚರಣೆಗಳಲ್ಲಿ ಕೇಂದ್ರ ಸ್ಥಾನವನ್ನು ಪಡೆಯುವ ಮಹಿಳಾ ಅಸ್ಮಿತೆಗೆ ಸಂಬಂಧಿಸಿದ ವಿಚಾರಗಳು ಮತ್ತು ಅದರಿಂದ ರೂಪುಗೊಳ್ಳುವ ಅವರ 'ಸ್ವ' ದ ಕಲ್ಪನೆ.
2. ಹಸ್ತ ಕಲೆ ಮತ್ತು ಇತರ ಕಲಾತ್ಮಕ ಅಭಿವ್ಯಕ್ತಿಗಳ ಕುರಿತು ಕಮಲಾದೇವಿಯವರು ನಡೆಸಿದ ಚಿಂತನೆ ಹಾಗೂ ಅವುಗಳಲ್ಲಿ ಪ್ರಕಟಗೊಳ್ಳುವ ಅವರ ಸೌಂದರ್ಯಶಾಸ್ತ್ರ ಮತ್ತು ಸಾಮುದಾಯಿಕ ನೋಟ.
3. ಅಂಚಿನ ಸಮುದಾಯಗಳ ಶ್ರೇಯಸ್ಸಿನ ಕುರಿತು ಕಮಲಾದೇವಿಯವರು ನಡೆಸಿದ ಚಿಂತನೆ ಮತ್ತು ಮಾಡಿದ ಪ್ರಯತ್ನ ಹಾಗೂ ಅವುಗಳಲ್ಲಿ ಸ್ಫುಟಗೊಳ್ಳುವ ಅವರ ಸಮಾಜವಾದಿ ಕಾಳಜಿಗಳು.
4. ಕಮಲಾದೇವಿಯವರ ಚಿಂತನೆ ಮತ್ತು ಸಾಧನೆಗಳಲ್ಲಿ ವ್ಯಕ್ತಗೊಳ್ಳುವ ವಿಶ್ವನೋಟ (ಕಾಸ್ಮೋಪೊಲಿಟನಿಸಮ್)
5. ಕಮಲಾದೇವಿಯವರ ಸಾರ್ವಜನಿಕ ಜೀವನದಲ್ಲಿ ಪ್ರಖರವಾಗಿ ಕಾಣಿಸುವ ಪ್ರಜಾತಾಂತ್ರಿಕ ಕಾಳಜಿಗಳು.

ಅಧ್ಯಾಯ 4 : ಕಮಲಾದೇವಿಯವರ ಚಿಂತನೆ ಮತ್ತು ಕಾಳಜಿಗಳ ಬೌದ್ಧಿಕ ವಿಕಸನ

ಮಹಾಪ್ರಬಂಧದ ಈ ಅಧ್ಯಾಯ ಕಮಲಾದೇವಿಯವರ ಬಹುರೂಪಿ ವ್ಯಕ್ತಿತ್ವದ ಅನೇಕ ಮಜಲುಗಳನ್ನು ಮೂರು ನೆಲೆಗಳಲ್ಲಿ ಅರ್ಥೈಸಲು ಪ್ರಯತ್ನಿಸುತ್ತದೆ. ಈ ಅಧ್ಯಾಯದ ಮೊದಲ ಭಾಗ ಚಿಂತಕರ ಹಾಗೂ ಚಿಂತನ ಪರಂಪರೆಗಳ ಬೌದ್ಧಿಕ ವಿಕಸನದ ಪ್ರಕ್ರಿಯೆ ಒಳಗೊಳ್ಳುವ ಕೆಲವು ಪ್ರಮುಖವಾದ ತಾತ್ತ್ವಿಕ ಅಂಶಗಳನ್ನು ಚರ್ಚಿಸಬಯಸುತ್ತದೆ. ಅಧ್ಯಾಯದ ಎರಡನೆಯ ಭಾಗ ಕಮಲಾದೇವಿಯವರ ಚಿಂತನೆ ಮತ್ತು ಕಾಳಜಿಗಳ ಬೌದ್ಧಿಕ ವಿಕಸನವನ್ನು ಒಂದು ವಿಮರ್ಶಾತ್ಮಕ ಪರಿಪ್ರೇಕ್ಷ್ಯದಲ್ಲಿ ಮುಂದಿಡಬಯಸುತ್ತದೆ ಮತ್ತು ಈ ಅಧ್ಯಾಯದ ಕೊನೆಯ ಭಾಗ ಅವರ ಚಿಂತನೆ ಮತ್ತು ಕ್ರಿಯಾಚರಣೆಗಳ ಬೌದ್ಧಿಕ ವಿಕಸನದಲ್ಲಿ ಕಂಡು ಬರುವ ಜ್ಞಾನ ಮೀಮಾಂಸೆಯ ಸ್ವರೂಪದ ವೈಶಿಷ್ಟ್ಯ ಹಾಗೂ ವಿಶೇಷಗಳನ್ನು ಗುರುತಿಸುತ್ತದೆ.

ಅಧ್ಯಾಯ 5: ಪರಿಸಮಾಪ್ತಿ

ಕಮಲಾದೇವಿಯವರ ಬದುಕು, ಬರಹ, ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ಒಂದು ವಿಸ್ತೃತವಾದ ಚಾರಿತ್ರಿಕ ನೋಟದಲ್ಲಿ ವಿಷದಪಡಿಸಲು ಯತ್ನಿಸಿದ ಈ ಸಂಶೋಧನಾ ಮಹಾಪ್ರಬಂಧ ಪರಿಸಮಾಪ್ತಿಯ ರೂಪದಲ್ಲಿ ಕೆಲವು ಪ್ರತಿಫಲನಗಳನ್ನು ಮುಂದಿಡಬಯಸುತ್ತದೆ. ಈ ಪ್ರತಿಫಲನಗಳು

ಸಂಶೋಧನಾ ಪ್ರಬಂಧದುದ್ದಕ್ಕೂ ಬೇರೆ ಬೇರೆ ನೆಲೆಗಳಲ್ಲಿ ಮತ್ತು ಬೇರೆ ಬೇರೆ ರೀತಿಗಳಲ್ಲಿ ವ್ಯಕ್ತಗೊಂಡಿವೆಯಾದರೂ ಅವುಗಳನ್ನು ಕ್ರೋಢೀಕರಿಸುವ ಮತ್ತು ಸಂಕ್ಷಿಪ್ತವಾಗಿ ಮರುಮಂಡಿಸುವ ಅವಶ್ಯಕತೆಯಿದೆ. ಈ ನಿಟ್ಟಿನಲ್ಲಿ ಕಮಲಾದೇವಿಯವರ ಬದುಕು, ವ್ಯಕ್ತಿತ್ವ, ಚಿಂತನೆ ಹಾಗೂ ಕ್ರಿಯಾಶೀಲತೆಗೆ ಸಂಬಂಧಿಸಿದ ಕೆಲವು ಪ್ರಮುಖ ಅಂಶಗಳನ್ನು ವಿಮರ್ಶಾತ್ಮಕವಾಗಿ ಮುಂದಿಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

BIBLIOGRAPHY

Primary Sources

Chattopadhyaya, Kamaladevi, *The Awakening of Indian Women*. Madras: Everyman's Press, 1939.

Chattopadhyaya, Kamaladevi, *In War-torn China*. Bombay: Padma Publications, 1942.

Chattopadhyaya, Kamaladevi, *Japan: Its Strength and Weakness*. Bombay: Padma Publications, 1943.

Chattopadhyaya, Kamaladevi, *Uncle Sam's Empire*. Bombay: Padma Publications, 1944.

Chattopadhyaya, Kamaladevi, *America: The Land of Superlatives*. Bombay: Phoenix Publications, 1946.

Chattopadhyaya, Kamaladevi, *Socialism, and Society*. Hyderabad: Chetna Publication, 1950.

Chattopadhyaya, Kamaladevi, *Theatre in India*. Brussels: International Theatre Institute, 1956.

Chattopadhyaya, Kamaladevi, *Indian Handicrafts*. New Delhi: Allied Publishers, 1963.

Chattopadhyaya, Kamaladevi, *Preservation of the Cultural Values of a Society through Craftsmanship*. New Delhi: Indian Cooperative Union, 1964.

Chattopadhyaya, Kamaladevi. *Carpets and Floor Coverings of India*. Bombay: Taraporevala, 1969.

Chattopadhyaya, Kamaladevi, *Handicrafts of India*. New Delhi: Indian Council for Cultural Relations, 1975.

Chattopadhyaya, Kamaladevi, *The Glory of Indian Handicrafts*. New Delhi: Indian Book Company, 1976.

Chattopadhyaya, Kamaladevi, *Indian Embroidery*. New Delhi: Wiley Eastern, 1977.

Chattopadhyaya, Kamaladevi, *Tribalism in India*. New Delhi: Vikas Publishing House, 1978.

Chattopadhyaya, Kamaladevi, *India's Craft Tradition*. New Delhi: Publications Division, Ministry of Information and Broadcasting, Government of India, 1980.

Chattopadhyaya, Kamaladevi, Indian Women's Battle for Freedom, New Delhi: Abhinav Publications, 1982.

Chattopadhyaya, Kamaladevi, *Inner Recesses, Outer Spaces*. New Delhi: Navrang Publication, 1986.

Kamaladevi Chattopadhyaya, Personal Papers, Nehru Memorial Museum and Library (NMML)

Secondary Sources

Bhatia, Nandi. *Modern Indian Theatre: A Reader*. Oxford University Press, 2011.

Bakshi, S.R. *Kamaladevi Chattopadhyaya: Role for Women's Welfare*. New Delhi: Om Publication, 2000.

Brijbhushan, Jamila. *Kamaladevi Chattopadhyaya - Portrait of a Rebel*. New Delhi: Abhinav Publications, 2003.

Brijbhushan, Jamila. *The Costumes and Textiles of India*. Bombay: Taraporevala Treasure House of Books, 1958.

Chandra, Bipan. *Nationalism and Colonialism in Modern India*. New Delhi: Orient Blackswan Private Ltd, 1981.

Chatterjee, Partha. *Nationalist Thought and the Colonial World: A Derivative Discourse*. New Delhi: Oxford University Press, 1986.

Chatterjee, Partha. *The Nation and its Fragments*. Princeton University Press, 2020.

Chattiopadhyaya, Harindranath. *Life and Myself*. Bombay: Nalanda Publications, 1948.

Chaudhari, Asim Kumar. *Socialist Movement in India: The Congress Socialist Party, 1934-47*. Calcutta: Progressive Publishers, 1980.

Chowdhuri, Satyabrata Rai. *Leftism in India: 1917-1947*. New Delhi: Palgrave Macmillan, 2008.

Croosely, Nick. *Making Sense of Social Movements*. Jaipur: Rawat Publication, 2009.

Dhamija, Jasleen. *Kamaladevi Chattopadhyaya*. New Delhi: National Book Trust, 2007.

Dhamija, Jasleen, ed. *Asian embroidery*. Abhinav Publications, 2004.

Desai, A. R. *Social Background of Indian*. Bombay: Popular Publication, 1981.

Gandhi, and Mahadev H. Desai. An Autobiography, or, The Story of My Experiments with Truth. Navajivan Publishing House, 1927.

Ghosh, Raghunath. *Facets of Feminism*. New Delhi: Northern Book Centre, 2005.

Hollinger, David A. "Postethnic America: BeyondMulticulturalism."UK: Ellen Levine Library, 2006.

Jain, Devaki. *Women, Development, and the UN: A Sixty-Year Quest for Equality and Justice*. Indiana University Press, 2005.

Jain, Lakshmi Chand. "*The City of Hope: The Faridabad Story*" New Delhi: Concept Publishing Company, 1998.

Jain, Prathibha. *Gandhian Ideas, Social Movements, and Creativity*. Jaipur: Rawat Publication, 1985.

Lohia, Rammanohar. "*Marx Gandhi and Socialism*" Hyderabad: SamataVidhyalayaNyas, 1963.

M.V, Narayana Rao, ed. *Kamaladevi Chattopadhyaya: A True Karmayogi*. Bangalore: The Crafts Council of Karnataka, 2003.

Mahendru, K C. *Gandhi and the Congress Socialist Party, 1934-48: An Analysis of their Interaction*. Jalandhar: Asian Book Services, 1986.

Mayo, Katherine. *"Mother India*" Aegitas: University of Michigan Press, 1927.

Mehta, Ashok. *Reflections on the Socialist Era*. New Delhi: S Chand And Co, 1977.

Menon, M. Dilip. *Nationalism and Communism in South India: Malabar 1900-1948*. New Delhi: Cambridge Publication, 1984.

Narayan, Jayaprakash. *Socialism to Sarvodaya*. No. 2. Socialist Book Center, 1956.

Narayan, Jayaprakash. "*Why Socialism?*" Benares: All India Congress Socialist Party, 1936.

Nanda, Reena. *Kamaladevi Chattopadhyaya: A Biography*. New Delhi: Oxford University Press, 2002.

Narasimhan, Sakuntala. *Kamaladevi Chattopadhyaya - The Romantic Rebel*. New Delhi: Sterling Publishers Pvt Ltd, 1999.

Nehru, Jawaharlal. 'An Autobiography', New Delhi: Penguin Books, 2017

Pandey, Gyanendra. *"Remembering Partition: Violence, Nationalism and History in India*", New Delhi: Cambridge University Press, 2001.

Parekh, Bikhu. *Colonialism, Tradition, and Reform - An Analysis of Gandhi's Political Discourse*. New Delhi: Sage Publication, 1989.

Parekh, Bhikhu. *Gandhi's Political Philosophy: A Critical Examination*. London: Macmillan Publication, 1989.

Parekh, Bhikhu. *Gandhi: A Very Short Introduction,* New York: Oxford University Press, 2001

Prasad, Bimal, ed. *Jayaprakash Narayan: Essential Writings (1929-1979)*. New Delhi: Manohar Publication, 2002.

Rao, Gulvadi Venkata. "Indira Bai: The Triumph of Truth and virtue" Mangalore: Basel Mission, 1899.

Reddy, G K.C, ed. *Fifty Years of Socialist Movement in India*. New Delhi: Samata Era Publication, 1984.

Revathi, A "The Truth About Me", New Delhi: Penguin Books, 2010

Rousseau, Jean Jacques. 'Confessions', Switzerland: Launette, 1790.

Russell, Bertrand, and Simon Blackburn. Why I am not a Christian, London: Allen & Unwin,1967

Sahai, Krishna. *Socialist Movement in India*. New Delhi: Classical Publishing Company, 1988.

Said, Edward. “Representations of the Intellectual: The 1993 Reith Lectures, New York: Vintage Books,1996.

Sankar, Ghose. *Political Ideas of Movements in Modern India*. Calcutta: Ailed Publishers, 1975.

Sangari, Kumkum, and Sudesh Vaid, eds. *Recasting Women: Essays in Indian Colonial History*. Rutgers University Press, 1990.

Shah, Ghanshyam. *Social Movements in India: A Review of Literature*. New Delhi: Sage Publication, 1990.

Sharma, Radha Krishna. *Nationalism, Social Reform and Indian Women*. Patna: Janaki Prakashan, 1981.

Sinha, Mrinalini. *Specters of Mother India*. Duke University Press, 2006.

Slate, Nico. “*Colored Cosmopolitanism. The Shared Struggle for Freedom in the United States and India”* London: Harvard University Press, 2012.

Journals

Basu, Aparna. "Feminism and Nationalism in India, 1917-1947." *Journal of Women's History* 7.4 (1995): 95-107.

Bharucha, Rustom. "Anatomy of Official Cultural Discourse: A Non-Government Perspective." *Economic and Political Weekly Vol. 27 No.31/32* (1992): 1667-1676.

Bhagavan, Manu. "Reflections on Indian Internationalism and a Post national Global Order: A Response to Partha Chatterjee." *Comparative Studies of South Asia, Africa and the Middle East* 37.2 (2017): 220-225.

Bharucha, Rustom. "Notes on the Invention of Tradition." *Economic and Political Weekly Vol. 24, No 33* (Aug 19, 1989): 1907-1909+1911-1914.

Bhattacharya, Mihir. "Moment and Movement: People's Creativity in the History of Progress." *Social Scientist* 39.11/12 (2011): 41-47.

Chatterjee, Partha. "Colonialism, Nationalism and Colonialized Women: The Context in India." *American Ethnologist, Vol. 16, No. 4* (Nov 1989): 622-633.

Chatterjee, Partha, Kumkum Sangari, and Sudesh Vaid. "The Nationalist Resolution of the Women's Question." (1989): 233-253.

Dahab, F. Elizabeth. "On Edward Said, Scholar and Public Intellectual." *CLC Web: Comparative Literature and Culture* 5.4 (2003): 1.

Derrida, Jacques. "On Cosmopolitanism." *Drifting-Architecture and Migrancy*. Routledge, 2003. 60-72.

Dhamija, Jasleen. "Textile: The Non-Verbal Language." *Global Textile Encounters* (2003): 303-308.

Devenish, Annie. "Performing the Political Self: AStudy of IdentityMaking and Self Representation in the Autobiographies of India's FirstGeneration of Parliamentary Women." Women's History Review 22.2 (2013): 280-294.

Dutta, Sangeeta. "Relinquishing the Halo: Portrayal of Mother in Indian Writing in English." *Economic and Political Weekly, Vol. 25, No. 42/43* (Oct, 20-27, 1990): WS84-Ws94.

Elam, J. Daniel. "New cosmopolitanisms of Forgotten Diasporas." *American Quarterly* 65.2 (2013): 425-435.

Falk, Nancy Ellen Auer. "Women In-Between: Conflicting Values in Delhi." *The Journal of Religion, Vol. 67, No 2* (April 1987): 257-274.

Ghose, Bhaskar. "Theatre: The Emerging of a New Form." *India International Centre Quarterly* 30.2 (2003): 51-63.

Hubel, Teresa. "Charting the Anger of Indian Women through Narayan's Savitri." In Modern Fiction Studies, Vol.39, No.1, 1993,p- 113-130.

Jain, L. C. "Poverty, Environment, Development: A View from Gandhi's Window." *Economic and Political Weekly Vol. 23 No 7* (Feb 13, 1988): 311-320.

Jain, L. C. "Kamaladevi." *Economic and Political Weekly, Vol. 23, No. 48* (Nov 26, 1988): 2520-2521.

Jain, Jasbir. "Daughters of Mother India in Search of a Nation: Women's Narratives about the Nation." *Economic and Political Weekly* (2006): 1654-1660.

Joshi, Joanna Liddle, and Rama. "Gender and Imperialism in British India." *Economic and Political Weekly, Vol. 20, No. 43* (Oct 26, 1985): WS72-WS78.

Katzenstein, Mary Fainsod. "Towards Equality? Cause and Consequence of the Political Prominence of Women in India." *Asian Survey, Vol. 18, No. 5* (May, 1978): 473-486.

Kishwar, Madhu. "Gandhi on Women." *Economic and Political Weekly Vol. 20 No. 40* (Oct 5, 1985): 1691-1702.

Kronick, Joseph G. "Philosophy as Autobiography: The Confession of Jacques Derrida." *MLN Comparative Literature Issue, Vol. 115, No. 5* (Dec, 2000): 997-1018.

Lal, Vinay. "Kamaladevi Chattopadhyay and the Idea of the Global South." *Groniek* 220 (2019).

Lamb, Sarah. "The Making and Unmaking of Persons: Notes on Aging and Gender in North India ." *Ethos, Vol. 25, No. 3* (Sep 1997): 279-302.

Lateef, Shahida. "Whither the Indian Women's Movement?" *Economic and Political Weekly Vol. 12, No.47* (Nov 19, 1977): 1948-1951.

Malhotra, Anshu. "Every Women Is a Mother in Embryo: Lala Lajpat Rai and Indian Womanhood." *Social Scientist, Vol. 22, No 1/2* (Jan - Feb, 1994): 40-63.

Mehta, Pratap Bhanu. "Cosmopolitanism and the Circle of Reason" *Political theory* 28.5 (2000): 619-639.

Miller, David. "Cosmopolitanism: A Critique." *Critical Review of International Social and Political Philosophy* 5.3 (2002): 80-85.

Mondal, Anshuman. "The Emblematic of Gender and Sexuality in Indian Nationalist Discourse." *Modern Asian Studies, Vol. 36, No. 4* (October 2002): 913-936.

Parekh, Bhikhu. "Cosmopolitanism and Global Citizenship." *Review of International Studies* 29.1 (2003): 3-17.

Ramusack, Barbara N. "Embattled Advocates: the Debate over Birth Control in India, 1920-40." *Journal of Women's History* 1.2 (1989): 34-64.

Samaddar, Ranabir. "Jayaprakash Narayan and the Problem of Representative Democracy." *Economic and Political Weekly* (2008): 49-58.

Sinha, Chitra. "Images of Motherhood: The Hindu Code Bill Discourse." *Economic and Political Weekly, Vol.42, No 43* (Oct, 27 to Nov 2, 2007): 49-57.

Sinha, Mrinalini. "Refashioning Mother India: Feminism and Nationalism in Late-Colonial India." *Feminist Studies Vol. 26, No 3* (2002): 623-644.

Sethi, Ritu. "Catalysing Craft: Women Who Shaped the Way." In India International Centre Quarterly, Vol. 39, 3/4, 2012, p-168-185.

Sinha, Mrinalini. "Reading Mother India: Empire, nation, and the female Voice." *Journal of Women's History* 6.2 (1994): 6-44.